# ಅಭ್ಯಾಸ ಪುಸ್ತಕ ಬಳಕೆಯ

# ಮಾರ್ಗದರ್ಶಿ

(ಶಿಕ್ಷಕರಿಗಾಗಿ)

ತರಗತಿ: 4 ರಿಂದ 9

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ

ಬೆಂಗಳೂರು-85

Scanned by CamScanner

# ಮುನ್ನುಡಿ

ಇಂದಿನ ಸ್ಪರ್ಧಾತ್ಮಕ ಪ್ರಪಂಚದಲ್ಲಿ ಶಿಕ್ಷಣದ ಧ್ಯೇಯೋದ್ದೇಶಗಳಲ್ಲಿ ಬದಲಾವಣೆಗಳು ಆಗುತ್ತಿರುವುದು ಕಂಡುಬರುತ್ತಿದೆ. ಇದರಿಂದ ಕಲಿಕೆಯ ವಿಧಾನವು ಕೇವಲ ಪರೀಕ್ಷೆ/ಪಠ್ಯಪುಸ್ತಕಗಳನ್ನು ಅವಲಂಬಿಸದೇ ವಿವಿಧ ವಿಧಾನಗಳ ಮೂಲಕ ಸ್ವಕಲಿಕೆ ಮತ್ತು ಸಹಕಲಿಕೆಯನ್ನು ಆಧರಿಸುವತ್ತ ಸಾಗುತ್ತಿರುವ ಹಿನ್ನೆಲೆಯಲ್ಲಿ ತಮ್ಮ ಆಸಕ್ತಿ, ಅಭಿರುಚಿ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ ಮಕ್ಕಳ ಕಲಿಕೆಗೆ ಅನುಕೂಲಿಸುವ ಸನ್ನಿವೇಶಗಳನ್ನು ನೀಡುವುದರೊಂದಿಗೆ ಉತ್ತಮವಾದ ಕಲಿಕಾ ಸಾಮಗ್ರಿಗಳನ್ನು ಒದಗಿಸುವುದು ಅತ್ಯವಶ್ಯಕವಾಗಿದೆ.

ಆದ್ದರಿಂದ 4,5,6,7,8 ಮತ್ತು 9 ನೇ ತರಗತಿಗಳಿಗೆ ಕನ್ನಡ ಮತ್ತು ಗಣಿತ ವಿಷಯಗಳಲ್ಲಿ ಹಾಗೂ 5,6,7,8 ಮತ್ತು 9 ನೇ ತರಗತಿಗಳಿಗೆ ಇಂಗ್ಲಿಷ್ ವಿಷಯದಲ್ಲಿ ಅಭ್ಯಾಸ ಪುಸ್ತಕಗಳನ್ನು ರಚಿಸಲಾಗಿದೆ. ಪ್ರತಿ ಅಭ್ಯಾಸ ಪುಸ್ತಕವನ್ನು ಎರಡು ಭಾಗಗಳಲ್ಲಿ ರಚಿಸಲಾಗಿದ್ದು ಮೊದಲ ಅರ್ಧವಾರ್ಷಿಕ ಅವಧಿಯಲ್ಲಿ ಭಾಗ 1 ಅಭ್ಯಾಸ ಪುಸ್ತಕವನ್ನು ಹಾಗೂ ಎರಡನೇ ಅರ್ಧವಾರ್ಷಿಕ ಅವಧಿಯಲ್ಲಿ ಭಾಗ 2 ಅಭ್ಯಾಸ ಪುಸ್ತಕವನ್ನು ನೀಡಲಾಗುವುದು. ಈಗಾಗಲೇ ಭಾಗ 1 ಅಭ್ಯಾಸಪುಸ್ತಕಗಳು ಸಿದ್ಧಗೊಂಡು ನಿಮ್ಮ ಶಾಲೆಗಳಿಗೆ ತಲುಪಿವೆ. ಈ ಅಭ್ಯಾಸ ಪುಸ್ತಕಗಳ ಪ್ರತಿ ಘಟಕದ ಅಂತ್ಯದಲ್ಲಿ ಕಿರು ಪರೀಕ್ಷೆಯನ್ನು (Micro test) ನೀಡಿದ್ದು ಮೌಲ್ಯಮಾಪನ ಮಾಡಲು ವಿದ್ಯಾರ್ಥಿಗಳಿಗೆ ಸ್ವಮೌಲ್ಯಮಾಪನ ಸಾಧನವನ್ನು ಘಟಕವಾರು ನೀಡಿದೆ. ವೈವಿಧ್ಯಮಯ ಮೌಲ್ಯಮಾಪನ ಅಂಶಗಳ ಮೂಲಕ ಜ್ಞಾನದ ಅಭಿವೃದ್ಧಿಗೆ ಕಲಿಕಾ ಅನುಭವಗಳನ್ನು ಬಳಸಿ ಮಕ್ಕಳಿಂದಲೇ ಜ್ಞಾನವನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗುವಂತೆ ಚಟುವಟಿಕೆಗಳನ್ನು ನೀಡಿದೆ.

ಶಿಕ್ಷಕರು ಈ ಅಭ್ಯಾಸ ಪುಸ್ತಕಗಳನ್ನು ಪಠ್ಯಪುಸ್ತಕಗಳ ಬದಲಾಗಿ ಬಳಸಬೇಕೆಂದು ಗ್ರಹಿಸಬಾರದು. ಪಠ್ಯವಿಷಯಗಳನ್ನು ಬೋಧಿಸುವುದರ ಜೊತೆಜೊತೆಗೆ ಈ ಅಭ್ಯಾಸ ಪುಸ್ತಕಗಳಲ್ಲಿನ ಚಟುವಟಿಕೆಗಳನ್ನು ಮಾಡಿಸುವುದರ ಮೂಲಕ ಕಲಿಕೆ ಆಗಿರುವುದರ ಬಗ್ಗೆ ಖಚಿತಪಡಿಸಿಕೊಳ್ಳಬಹುದು.

ಈ ಅಭ್ಯಾಸ ಪುಸ್ತಕಗಳನ್ನು ಯಾವಾಗ ಮಾಡಿಸಬೇಕು, ಯಾರು ಮಾಡಿಸಬೇಕು ಎಂಬ ಸಂದೇಹಗಳನ್ನು ದೂರ ಮಾಡಲು ವಿಷಯವಾರು (ಕನ್ನಡ, ಇಂಗ್ಲಿಷ್ ಮತ್ತು ಗಣಿತ) ಮಾರ್ಗದರ್ಶನವನ್ನು ಈ ಕಿರು ಹೊತ್ತಿಗೆಯಲ್ಲಿ ನೀಡಲಾಗಿದ್ದು ಶಿಕ್ಷಕರು ಇವುಗಳನ್ನು ಸಮಗ್ರವಾಗಿ ಓದಿ ಅಭ್ಯಾಸ ಪುಸ್ತಕಗಳನ್ನು ಸಮರ್ಪಕವಾಗಿ ಬಳಸುವುದು.

ಅಭ್ಯಾಸ ಪುಸ್ತಕಗಳ ರಚನೆಯಲ್ಲಿ ಸಹಕರಿಸಿದ ಅಕ್ಷರ ಫೌಂಡೇಶನ್, ಪ್ರಥಮ್ ಮೈಸೂರು, ಶಿಕ್ಷಣ ಫೌಂಡೇಶನ್ ಸಂಸ್ಥೆಯವರು ಹಾಗೂ ರಚನಾ ಸಮಿತಿಯವರಿಗೆ ಶಿಕ್ಷಣ ಇಲಾಖೆಯು ಆಭಾರಿಯಾಗಿದೆ.

ಆಯುಕ್ತರು
ಸಾರ್ವಜನಿಕ ಶಿಕ್ಷಣ ಇಲಾಖೆ
ಬೆಂಗಳೂರು



P-102-1

Scanned by CamScanner

## ಪರಿವಿಡಿ


1. ಪೀಠಿಕೆ
2. ಅಭ್ಯಾಸ ಪುಸ್ತಕಗಳ ಉದ್ದೇಶಗಳು
3. ಅಭ್ಯಾಸ ಪುಸ್ತಕಗಳ ಲಕ್ಷಣಗಳು
4. ಅಭ್ಯಾಸ ಪುಸ್ತಕಗಳು ಯಾರಿಗೆ ಮತ್ತು ಏಕೆ?
5. ಅಭ್ಯಾಸ ಪುಸ್ತಕಗಳ ವಿಷಯ ವಿಸ್ತಾರ (ವ್ಯಾಪ್ತಿ)
6. ಅಭ್ಯಾಸ ಪುಸ್ತಕಗಳನ್ನು ಯಾವಾಗ ಮತ್ತು ಎಲ್ಲಿ ಬಳಸಬೇಕು?
7. ಅಭ್ಯಾಸ ಪುಸ್ತಕಗಳನ್ನು ಹೇಗೆ ಬಳಸಬೇಕು?
8. ಅಭ್ಯಾಸ ಪುಸ್ತಕಗಳನ್ನು ಬಳಸುವ ಬಗ್ಗೆ ವಿದ್ಯಾರ್ಥಿಗಳಿಗೆ ಸೂಚನೆಗಳು
9. ಅಭ್ಯಾಸ ಪುಸ್ತಕಗಳನ್ನು ಬಳಸುವ ಬಗ್ಗೆ ಶಿಕ್ಷಕರಿಗೆ ಸೂಚನೆಗಳು
10. ಅಭ್ಯಾಸ ಪುಸ್ತಕಗಳನ್ನು ಬಳಸುವ ಬಗ್ಗೆ ಪೋಷಕರಿಗೆ ಸೂಚನೆಗಳು
11. ಅಭ್ಯಾಸ ಪುಸ್ತಕವನ್ನು ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಅಳವಡಿಸುವುದು ಹೇಗೆ?
12. ಅಭ್ಯಾಸ ಪುಸ್ತಕಗಳ ಬಳಕೆ ಮತ್ತು ಮೌಲ್ಯಮಾಪನ ಕುರಿತು ಮಾರ್ಗದರ್ಶನ ಅಧಿಕಾರಿಗಳಿಗೆ ಸೂಚನೆಗಳು
13. ಅಭ್ಯಾಸ ಪುಸ್ತಕಗಳ ಬಳಕೆಯ ಬಗ್ಗೆ ತಂತ್ರಾಂಶ ಬಳಸುವ ಕುರಿತು ಸೂಚನೆಗಳು
14. ವಿಷಯವಾರು ಅಭ್ಯಾಸ ಪುಸ್ತಕಗಳ ಬಳಕೆಯ ಕುರಿತು ಸೂಚನೆಗಳು
    - 14.1 ಕನ್ನಡ (ಭಾಷೆ)
    - 14.2 ಇಂಗ್ಲಿಷ್ (ದ್ವಿತೀಯ ಭಾಷೆ)
    - 14.3 ಗಣಿತ
15. ಅನುಬಂಧಗಳು
    - 15.1. ಅಭ್ಯಾಸ ಪುಸ್ತಕಗಳ ಮೂಲಕ ಶಿಕ್ಷಕರು ಮಕ್ಕಳ ಕಲಿಕೆಯ ಮೌಲ್ಯಮಾಪನ ಮಾಡುವ ನಮೂನೆ
    - 15.2 ಅಭ್ಯಾಸ ಪುಸ್ತಕಗಳ ಬಳಕೆಯ ಕುರಿತು ಸಂದರ್ಶಕರ ಮೌಲ್ಯಮಾಪನ ನಮೂನೆ.




Scanned by CamScanner

## 1.ಪೀಠಿಕೆ

ಬೋಧನೆಯು ಪರಿಣಾಮಕಾರಿಯಾಗಬೇಕಾದರೆ ಮಕ್ಕಳ ಅಗತ್ಯತೆಗಳನ್ನು ಪೂರೈಸಲು ಹಾಗೂ ಬೋಧನಾ ಕಲಿಕಾ ಸನ್ನಿವೇಶದಲ್ಲಿನ ನಿರ್ಬಂಧಗಳನ್ನು ಸರಿಪಡಿಸಲು ಪೂರಕ ಕಲಿಕಾ ಸಾಮಗ್ರಿಗಳು ಬಹುಮುಖ್ಯ ಪಾತ್ರವನ್ನು ವಹಿಸುತ್ತವೆ. ಈ ನಿಟ್ಟಿನಲ್ಲಿ ಬಹು ಆಯಾಮ ಕಲಿಕೆಯಲ್ಲಿ ತೊಡಗಿಸಿಕೊಳ್ಳಲು ಮತ್ತು ಮಗುವು ತನ್ನ ಜ್ಞಾನವನ್ನು ತಾನೇ ಸೃಷ್ಟಿಸಿಕೊಳ್ಳುವಂತಹ ನೂತನ ವಿಧಾನವನ್ನು ಒಳಗೊಂಡ ಅಭ್ಯಾಸ ಪುಸ್ತಕಗಳನ್ನು ಪಠ್ಯಪುಸ್ತಕಗಳಿಗೆ ಪೂರಕವಾಗಿ ರಚಿಸುವ ಅಗತ್ಯತೆ ಇದೆ. ವೀಕ್ಷಣೆ, ಅರ್ಥೈಸುವಿಕೆ, ಜ್ಞಾನದ ಸಂರಚನೆಯಂತಹ ಲಕ್ಷಣಗಳು ಪಠ್ಯಪುಸ್ತಕಗಳಲ್ಲಿ ಅಳವಡಿಕೆಯಾಗಿದ್ದರೂ ಸನ್ನಿವೇಶವನ್ನು ಅರ್ಥೈಸುವುದು, ಜ್ಞಾನದ ಸಂರಚನೆಗೆ ಹೆಚ್ಚಿನ ಚಟುವಟಿಕೆಗಳು, ಅಭಿವ್ಯಕ್ತಿಗೊಳಿಸುವಂತಹ ಲಕ್ಷಣಗಳನ್ನು ಅಭ್ಯಾಸ ಪುಸ್ತಕಗಳಲ್ಲಿ ಅಳವಡಿಸುವ ಅವಶ್ಯಕತೆಯನ್ನು ಮನಗಂಡು ತರಗತಿವಾರು, ವಿಷಯವಾರು ಅಭ್ಯಾಸ ಪುಸ್ತಕಗಳನ್ನು 4,5,6,7,8 ಮತ್ತು 9 ನೇ ತರಗತಿಗಳಿಗೆ (4ನೇ ತರಗತಿಗೆ ಕನ್ನಡ ಮತ್ತು ಗಣಿತ ಮಾತ್ರ) ಕನ್ನಡ, ಇಂಗ್ಲಿಷ್ ಮತ್ತು ಗಣಿತ ವಿಷಯಗಳಲ್ಲಿ ರಚಿಸಿದೆ. ಪ್ರತಿ ಅಭ್ಯಾಸ ಪುಸ್ತಕವನ್ನು ಎರಡು ಭಾಗಗಳಲ್ಲಿ ತಯಾರಿಸಲಾಗಿದೆ. ಈ ಅಭ್ಯಾಸ ಪುಸ್ತಕಗಳಲ್ಲಿ ಬರವಣಿಗೆಗೆ ಹೆಚ್ಚು ಒತ್ತು ನೀಡಿದ್ದು ಜ್ಞಾನ ಸಂರಚನೆಗೆ ಅನುಕೂಲವಾಗುವಂತಹ ಗ್ರಹಿಕೆಗೆ ಸಂಬಂಧಿಸಿದ ಅಭ್ಯಾಸಗಳು, ಪರಾಮರ್ಶನ ಅಭ್ಯಾಸಗಳು, ಚಟುವಟಿಕೆಗಳನ್ನು ಒಳಗೊಂಡಂತೆ ಈ ಅಭ್ಯಾಸಪುಸ್ತಕಗಳು ಸಿದ್ಧವಾಗಿವೆ.

## 2.ಅಭ್ಯಾಸ ಪುಸ್ತಕದ ಉದ್ದೇಶಗಳು

- ಕಲಿಕೆಯು ಸಂವೇದನಾ ಶೀಲ ಹಾಗೂ ವರ್ತನೆಯ ರಚನಾತ್ಮಕ ಬದಲಾವಣೆಯಾಗಿರುತ್ತದೆ. ಇದು ಔಪಚಾರಿಕ ಹಾಗೂ ಅನೌಪಚಾರಿಕವಾಗಿ ನಡೆಯುವುದರಿಂದ ಮಗುವಿನ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸಿ ಖಚಿತತೆಯನ್ನು ದೃಢಪಡಿಸುವುದು ಅಭ್ಯಾಸ ಪುಸ್ತಕದ ಪ್ರಮುಖ ಉದ್ದೇಶವಾಗಿದೆ.
- ಬೋಧನಾ–ಕಲಿಕೆಗೆ ನೆರವಾಗುವ ಪಠ್ಯಪುಸ್ತಕದ ಸಾಮರ್ಥ್ಯಗಳನ್ನು ಅಂತರ್ಗತಗೊಳಿಸಿಕೊಳ್ಳಲು ಪ್ರಾಯೋಗಿಕ ಚಟುವಟಿಕೆಗಳನ್ನು ನೀಡುವುದು
- ಕಲಿಕೆಯನ್ನು ತರಗತಿ ಕೋಣೆಗೆ ಸೀಮಿತಗೊಳಿಸದೆ ಮಗುವಿನ ನಿತ್ಯಜೀವನಕ್ಕೂ ಅಳವಡಿಸುವುದು
- ನವೀನ ಹಾಗೂ ನಾವೀನ್ಯಯುತ ಚಟುವಟಿಕೆಗಳನ್ನು ಅಳವಡಿಸುವುದರ ಮೂಲಕ ಮಕ್ಕಳಲ್ಲಾಗುವ ಕಲಿಕೆಯಲ್ಲಿನ ಭಿನ್ನತೆಯನ್ನು ಹೋಗಲಾಡಿಸುವುದು
- ಕಲಿಕೆಗೆ ಅಭ್ಯಾಸವು ಭದ್ರಬುನಾದಿಯಾಗಿರುವುದರಿಂದ ವಿವಿಧ ಪೂರಕ ಚಟುವಟಿಕೆಗಳ ಮೂಲಕ ಕಲಿಕೆಯನ್ನು ದೃಢಪಡಿಸುವುದು
- ಸ್ವವೇಗ, ಸ್ವಪ್ರೇರಿತ ಕಲಿಕೆಯನ್ನು ಉತ್ತೇಜಿಸುವುದರ ಮುಖಾಂತರ ಪ್ರತಿ ಮಗುವಿಗೆ ಕಲಿಕಾ ಪ್ರಕ್ರಿಯೆಯನ್ನು ಆಸಕ್ತಿದಾಯಕ ಹಾಗೂ ಆನಂದದಾಯಕವನ್ನಾಗಿಸುವುದು
- ಮೌಲ್ಯಮಾಪನವನ್ನು ನಿರಂತರವಾಗಿಸಿ ಅಭ್ಯಾಸವನ್ನು ಕಲಿಕೆಯ ಭಾಗವನ್ನಾಗಿ ರೂಢಿಸುವುದು



P-102-2

Scanned by CamScanner

## 3.ಅಭ್ಯಾಸ ಪುಸ್ತಕಗಳ ಲಕ್ಷಣಗಳು

- ಭಾಷಾ ವಿಷಯಗಳಲ್ಲಿ ಆಲಿಸುವುದು, ಮಾತನಾಡುವುದು, ಓದುವುದು, ಬರೆಯುವುದು ಮತ್ತು ವ್ಯಾಕರಣ ಹಾಗೂ ಗಣಿತ ವಿಷಯದಲ್ಲಿನ ಸಂಕಲನ, ವ್ಯವಕಲನ, ಗುಣಾಕಾರ ಮತ್ತು ಭಾಗಾಕಾರ ಇತ್ಯಾದಿ ಮೂಲಭೂತ ಕೌಶಲಗಳಿಗೆ ಹೆಚ್ಚು ಪ್ರಾಶಸ್ತ್ಯವನ್ನು ನೀಡಿದೆ.
- ಶ್ರೇಣೀಕೃತವಾಗಿರುವ ಚಟುವಟಿಕೆಗಳನ್ನು, ವ್ಯಾಕರಣ ಹಾಗೂ ಶಬ್ದಕೋಶಕ್ಕೆ (vocabulary) ಸಂಬಂಧಿಸಿದಂತೆ ಹೆಚ್ಚು ಚಟುವಟಿಕೆಗಳನ್ನು, ಆಕರ್ಷಣೀಯ ಹಾಗೂ ಸ್ಪಷ್ಟ ಚಿತ್ರಗಳನ್ನು ಒಳಗೊಂಡ ಚಟುವಟಿಕೆಗಳನ್ನು ಕಲಿಕೆಗೆ ಪೂರಕವಾಗಿ ಅಳವಡಿಸಿದೆ.
- ಪುನರಾವರ್ತನೆಗೆ ಹೆಚ್ಚು ಗಮನ ನೀಡಲು ಹಿಂದಿನ ತರಗತಿಯಲ್ಲಿನ ಕಲಿಕಾಂಶಗಳಿಗೆ ಸೇತುಬಂಧ ಅಭ್ಯಾಸವು ಪ್ರಾರಂಭದಲ್ಲಿದ್ದು ಸ್ವಕಲಿಕೆಗೆ ಅನುಕೂಲವಾಗುವಂತಹ ಮತ್ತು ಅನ್ವಯಕ್ಕೆ ಸಂಬಂಧಿಸಿದ, ಗುಂಪಿನಲ್ಲಿ ಮಾಡುವ ಚಟುವಟಿಕೆಗಳಿವೆ.
- ಬರವಣಿಗೆ ಕೌಶಲಕ್ಕೆ ಹೆಚ್ಚು ಒತ್ತನ್ನು ಕೊಡುವ ಅಭ್ಯಾಸ ಚಟುವಟಿಕೆಗಳನ್ನು ನೀಡಿದೆ.
- ಪ್ರಸ್ತುತ ಪಠ್ಯಪುಸ್ತಕದಲ್ಲಿ ನೀಡಿರುವ ಚಟುವಟಿಕೆಗಳಿಗೆ ಪೂರಕವಾದ ನಾವೀನ್ಯ ಚಟುವಟಿಕೆಗಳನ್ನು ನೀಡಲಾಗಿದೆ.

## 4. ಅಭ್ಯಾಸ ಪುಸ್ತಕವು ಯಾರಿಗೆ ಮತ್ತು ಏಕೆ?

- ಸರ್ಕಾರಿ ಶಾಲೆಗಳಲ್ಲಿ ಓದುತ್ತಿರುವ 4 ರಿಂದ 9 ತರಗತಿಯ ಕನ್ನಡ ಮಾಧ್ಯಮದ ಎಲ್ಲಾ ವಿದ್ಯಾರ್ಥಿಗಳು ಈ ಅಭ್ಯಾಸಪುಸ್ತಕಗಳ ಲಾಭವನ್ನು ಪಡೆಯುತ್ತಾರೆ.
- ತರಗತಿವಾರು, ವಿಷಯವಾರು ಅಭ್ಯಾಸ ಪುಸ್ತಕಗಳನ್ನು 4,5,6,7,8 ಮತ್ತು 9 ನೇ ತರಗತಿಗಳಿಗೆ (4ನೇ ತರಗತಿಗೆ ಕನ್ನಡ ಮತ್ತು ಗಣಿತ ಮಾತ್ರ) ಕನ್ನಡ, ಇಂಗ್ಲಿಷ್ ಮತ್ತು ಗಣಿತ ವಿಷಯಗಳಲ್ಲಿ ರಚಿಸಿದೆ.
- ಈ ಅಭ್ಯಾಸ ಪುಸ್ತಕಗಳು ಪಠ್ಯಪುಸ್ತಕಕ್ಕೆ ಪೂರಕವಾಗಿರುವುದರಿಂದ ಮಕ್ಕಳಲ್ಲಿ ಕಲಿಕೆಯ ಗುಣಮಟ್ಟವನ್ನು ಹೆಚ್ಚಿಸುತ್ತದೆ.

**ಕೆಳಕಂಡ ಅಂಶಗಳನ್ನು ಮಕ್ಕಳಲ್ಲಿ ನಿರೀಕ್ಷಿಸಿ ಅಭ್ಯಾಸ ಪುಸ್ತಕಗಳನ್ನು ಸಿದ್ಧಪಡಿಸಲಾಗಿದೆ.**

❖ಒಂದೇ ತರಗತಿಯಲ್ಲಿರುವ ಒಂದೇ ವಿಷಯದಲ್ಲಿ ಮಕ್ಕಳಲ್ಲಿನ ಕಲಿಕೆಯು ಏಕರೂಪದಲ್ಲಿ ಇಲ್ಲದಿರುವುದರಿಂದ ಕಲಿಕೆಯಲ್ಲಿನ ಭಿನ್ನತೆಯನ್ನು ನಿವಾರಿಸಲು ಮಗು ತಾನೇ ಸ್ವಪ್ರೇರಿತ, ಸ್ವವೇಗದಿಂದ ಕಲಿಯಲು ನೆರವಾಗಲು

❖ತರಗತಿಯಲ್ಲಿ ಕಲಿತ/ಅಭ್ಯಸಿಸಿದ ವಿಷಯಗಳನ್ನು ದೃಢಪಡಿಸಿಕೊಳ್ಳಲು ನೆರವಾಗಿ ಮಗುವಿನಲ್ಲಿ ಆತ್ಮವಿಶ್ವಾಸವನ್ನು ಮೂಡಿಸಲು

❖ಅಭ್ಯಾಸ ಪುಸ್ತಕವು ಚಟುವಟಿಕೆ ಆಧಾರಿತವಾಗಿರುವುದರಿಂದ ಕಲಿಕೆಯ ಏಕತಾನತೆಯನ್ನು ದೂರವಾಗಿಸಲು

❖ಮಕ್ಕಳಿಗೆ ನೀಡಲಾಗುತ್ತಿದೆ, ಎನ್ನಲಾದ ಗೃಹಪಾಠದ ಹೊರೆಯು ಕಡಿಮೆಯಾಗಿ ಪ್ರತಿ ಮಗುವೂ ಗುಂಪಿನಲ್ಲಿ ಸ್ವ ಹಾಗೂ ಶಿಕ್ಷಕರ ಸಹಾಯದಿಂದ ಕಲಿಯಲು



P-102-2*

Scanned by CamScanner

- ❖ ಕಲಿಕೆಯಲ್ಲಿ ಸ್ವಪ್ರೇರಣೆಯನ್ನು ಉಂಟುಮಾಡಿ ಮಗುವಿನಲ್ಲಿ ಸ್ಪರ್ಧಾತ್ಮಕ ಮನೋಭಾವನೆಯನ್ನು ಬೆಳೆಸಲು
- ❖ ಅಭ್ಯಾಸ ಪುಸ್ತಕವು ಪಠ್ಯಪುಸ್ತಕಕ್ಕೆ ಪೂರಕವಾಗಿ ಹೆಚ್ಚಿನ ಮತ್ತು ವಿಶೇಷ ಮಾಹಿತಿಗಳನ್ನು ಒಳಗೊಂಡಿರುವುದರಿಂದ ಮಕ್ಕಳಿಗೆ ಆಕರ್ಷಣೀಯವಾಗಿಸಲು.

**5. ಅಭ್ಯಾಸ ಪುಸ್ತಕಗಳ ವಿಷಯ ವಿಸ್ತಾರ (ವ್ಯಾಪ್ತಿ)**

**5.1 : ಕನ್ನಡ:**

4ನೇ ತರಗತಿಯಿಂದ 9ನೇ ತರಗತಿವರೆಗೆ ರಚಿತವಾದ ಕನ್ನಡಭಾಷಾ ಅಭ್ಯಾಸ ಪುಸ್ತಕಗಳು ಕನ್ನಡ ಭಾಷಾ ಕಲಿಕೆಯನ್ನು ಸದೃಢಗೊಳಿಸಲು ಪೂರಕವಾಗಿವೆ. ಭಾಷಾ ಕೌಶಲಗಳಲ್ಲಿ ಓದುವುದು ಮತ್ತು ಬರೆಯುವುದಕ್ಕೆ ಈ ಅಭ್ಯಾಸ ಪುಸ್ತಕದಲ್ಲಿ ಹೆಚ್ಚಿನ ಆದ್ಯತೆ ನೀಡಲಾಗಿದೆ. ಪಠ್ಯಪುಸ್ತಕದಲ್ಲಿರುವ ವ್ಯಾಕರಣಾಂಶಗಳಿಗೆ ಪೂರಕವಾಗಿ ಹೆಚ್ಚು ಚಟುವಟಿಕೆಗಳನ್ನು ನೀಡಿ ಈ ಅಭ್ಯಾಸ ಪುಸ್ತಕ ರಚನೆ ಮಾಡಲಾಗಿದೆ.

ವಿದ್ಯಾರ್ಥಿಗಳ ಗುಣಾತ್ಮಕ ಕಲಿಕೆಗೆ, ಭಾಷಾ ಕೌಶಲಗಳನ್ನು ಹೆಚ್ಚಿಸಿಕೊಳ್ಳಲು ಹಾಗೂ ನಿತ್ಯಜೀವನದಲ್ಲಿ ಭಾಷೆಯನ್ನು ಸಮರ್ಪಕವಾಗಿ ಬಳಸಿಕೊಳ್ಳಲು ಸಹಾಯಕವಾಗಿದೆ. ಈ ಅಭ್ಯಾಸ ಪುಸ್ತಕದಲ್ಲಿನ ವಿಷಯಗಳು ತರಗತಿವಾರು ಶ್ರೇಣೀಕೃತವಾಗಿ ವಿಸ್ತಾರವಾಗಿದ್ದು, ಚಟುವಟಿಕೆಗಳನ್ನು ಅಸಕ್ತಿಯಿಂದ ಮಾಡಲು ಸಹಾಯಕವಾಗಿವೆ.

ವರ್ಣಮಾಲೆ, ಗುಣಿತಾಕ್ಷರಗಳು, ಸಂಯುಕ್ತಾಕ್ಷರಗಳು, ಪ್ರಾಸಗಳು, ಪದಗಳ ಸ್ಪಷ್ಟ ಉಚ್ಚಾರ, ನಾಮಪದ, ಆಡು ಭಾಷೆ ಹಾಗೂ ಗ್ರಾಂಥಿಕ ಭಾಷೆ, ಲೇಖನ ಚಿಹ್ನೆಗಳು, ನಾನಾರ್ಥಕ ಮತ್ತು ಸಮಾನಾರ್ಥಕ ಪದಗಳು, ವಚನಗಳು, ಲಿಂಗಗಳು, ಒಗಟುಗಳು, ಕಾಲಗಳು, ಗಾದೆಗಳು, ದ್ವಿರುಕ್ತಿಗಳು, ಜೋಡಿ ಪದಗಳು, ಸಂಧಿಗಳು, ವಿಭಕ್ತಿ ಪ್ರತ್ಯಯಗಳು, ನುಡಿಗಟ್ಟು, ಸಮಾಸಗಳು, ವಾಕ್ಯ ರಚನೆ, ಛಂದಸ್ಸು, ಪ್ರಬಂಧ, ಪತ್ರ ಲೇಖನ, ಕತೆ, ಸನ್ನಿವೇಶದ ವಾಕ್ಯ ರಚನೆ ಇತ್ಯಾದಿ ಕಲಿಕಾಂಶಗಳನ್ನು ಒಳಗೊಂಡಿದೆ.

**5.2 : Scope of the content in English**

As the workbook is based on the objective of developing all the four basic language skills namely, L/S/R/W through practice, every unit of the workbook has one section each on these skills and each skill is developed and practiced by getting exposed to the content. The content varies from word level to high level of language structure such as paragraph and diary entries, letters and authentic content taken from the sources like the newspapers and magazines.

The focus is on developing the language skills, developing vocabulary, content based grammar and language use. The different types of activities suggested for developing these are as follows:



Scanned by CamScanner

**Listening**: Listen and respond, Listen and repeat, Listen and answer, Listen and match, Listen and write, Listen and draw and listen and correct .
**Speaking:** Look and Speak, Interpreting facial expressions, Delivering a short speech, Dialogue practice, Pronunciation practice.
**Reading:** Reading a story, Reading visuals, Reading a poem, Reading a table, Reading an advertisement, Reading a passage, Reading a graph, Skimming and scanning (different text types and comprehension) .
**Writing**: Completing the text, Spelling practice, Dialogue completion, Rearranging sentences, Short paragraph writing, letter writing, report writing, writing a notice, completing a pictorial story.
**Grammar and Language use:** Parts of speech, Tense, Vocabulary, Homophones, Prefixes and suffixes, Register-based words, Compound words, Word grid, Collocations.
Where ever additional input is required, it has been given and is illustrated.
Note: The activities suggested are distributed over all the levels of learning – classes of learning – class 5 to 9.

### 5.3: ಗಣಿತ ವಿಷಯದ ವ್ಯಾಪ್ತಿ

4ನೇ ತರಗತಿಯಿಂದ 9ನೇ ತರಗತಿವರೆಗೆ ರಚಿತವಾದ ಬದುಕಿಗೆ ಅಗತ್ಯವಾದ ಲೆಕ್ಕಾಚಾರ ಕಲಿಸುವ ಗಣಿತ ಅಭ್ಯಾಸ ಪುಸ್ತಕಗಳು ಮಕ್ಕಳ ಗಣಿತ ಕಲಿಕೆಯನ್ನು ಮತ್ತಷ್ಟು ದೃಢೀಕರಿಸುತ್ತವೆ. ಗಣಿತ ಅಭ್ಯಾಸ ಪುಸ್ತಕದ ಎಲ್ಲಾ ಚಟುವಟಿಕೆ/ಸಮಸ್ಯೆಗಳು ಮಕ್ಕಳ ದಿನನಿತ್ಯ ಬದುಕಿಗೆ ಸಂಬಂಧಿಸಿದ ಸನ್ನಿವೇಶಗಳನ್ನು ಒಳಗೊಂಡಿರುವುದರಿಂದ ಕಲಿಕೆ ಹೆಚ್ಚು ಬಲಗೊಳ್ಳುತ್ತದೆ. ಮಕ್ಕಳು ಇಲ್ಲಿನ ಚಟುವಟಿಕೆಯಲ್ಲಿ ಸಂತಸದಿಂದ ಪಾಲ್ಗೊಂಡು ಉತ್ತರ ಕಂಡುಹಿಡಿಯಲು ಪ್ರಯತ್ನಿಸುವುದರಿಂದ ಕಲಿಕೆಯು ಸುಲಭ ಹಾಗೂ ಪರಿಣಾಮಕಾರಿಯಗುತ್ತದೆ.

ಈ ಅಭ್ಯಾಸ ಪುಸ್ತಕದಲ್ಲಿನ ವಿಷಯಗಳು ತರಗತಿವಾರು ಶ್ರೇಣೀಕೃತವಾಗಿ ವಿಸ್ತಾರವಾಗಿವೆ. ಆಯಾ ಹಂತಕ್ಕೆ ಅನುಗುಣವಾಗಿ ಇಲ್ಲಿ 4 ರಿಂದ 9ನೇ ತರಗತಿ ಅಭ್ಯಾಸ ಪುಸ್ತಕಗಳನ್ನು ರಚಿಸಲಾಗಿದೆ. ಹಾಗಾಗಿ ವಿಷಯ ವ್ಯಾಪ್ತಿಯಲ್ಲಿ ಒಂದೇ ಕಂಡರೂ ಒಳಗಿನ ಚಟುವಟಿಕೆ ಮತ್ತು ಸಮಸ್ಯೆಗಳಲ್ಲಿ ವ್ಯತ್ಯಾಸವಿರುತ್ತದೆ. ಅಂದರೆ 4ನೇ ತರಗತಿಯಲ್ಲಿ ಸಂಕಲನವಿದೆ ಹಾಗೂ 7ನೇ ತರಗತಿಯಲ್ಲೂ ಸಂಕಲನವಿದೆ. ಆದರೆ ಅಲ್ಲಿ ಮಕ್ಕಳ ಮಟ್ಟಕ್ಕೆ ಅನುಗುಣವಾಗಿ ಶ್ರೇಣೀಕೃತ ಮಾಡಲಾಗಿದೆ. ಗಣಿತ ಅಭ್ಯಾಸ ಪುಸ್ತಕದಲ್ಲಿ ಮೋಜಿನ ಗಣಿತಕ್ಕೆ (ಗಣಿತದಲ್ಲಿ ಆಟ) ಆದ್ಯತೆ ನೀಡಿದೆ. ಇದನ್ನು ವಿದ್ಯಾರ್ಥಿಗಳು ಸಂತಸದಿಂದ ಮಾಡುತ್ತಾ ಆಟದ ಮೂಲಕ ಕಲಿಯಲು ನೆರವಾಗುತ್ತದೆ.



Scanned by CamScanner

**ಅಂಕಗಣಿತ:** ಅಂಕಿ–ಸಂಖ್ಯೆಗಳು, ಸ್ಥಾನಬೆಲೆ, ಗಣಿತದ ಮೂಲ ಕ್ರಿಯೆಗಳು, ಭಿನ್ನರಾಶಿ, ದಶಮಾಂಶ, ಶೇಕಡಾ ಕ್ರಮ, ಲ.ಸಾ.ಅ–ಮ.ಸಾ.ಅ, ಸರಾಸರಿ, ಭಾಗಲಬ್ಧ ಸಂಖ್ಯೆ ಮತ್ತು ಅವುಗಳ ಮೂಲಕ್ರಿಯೆಗಳು, ಅಭಾಗಲಬ್ಧ ಸಂಖ್ಯೆಗಳು, ತೂಕ, ಗಾತ್ರ, ಸಮಯ, ಮಾನಸಿಕ ಲೆಕ್ಕಾಚಾರ, ಸಂಖ್ಯೆಯೊಂದಿಗೆ ಆಟಗಳು, ವರ್ಗ ಹಾಗೂ ಘನ ಸಂಖ್ಯೆಗಳು, ದತ್ತಾಂಶಗಳು ಮತ್ತು ವಿನ್ಯಾಸಗಳು.

**ಬೀಜಗಣಿತ:** ಬೀಜಪದಗಳು ಮತ್ತು ಅವುಗಳ ವಿಧಗಳು, ಬೀಜೋಕ್ತಿಗಳು ಮತ್ತು ಅವುಗಳ ಮೇಲಿನ ಕ್ರಿಯೆಗಳು, ಅಪವರ್ತಿಸುವಿಕೆ, ಸಮೀಕರಣಗಳು, ನಿರ್ದೇಶಾಂಕ ರೇಖಾಗಣಿತ.

**ರೇಖಾಗಣಿತ:** ರೇಖಾಗಣಿತದ ಮೂಲ ಕಲ್ಪನೆಗಳು, 2 ಮತ್ತು 3 ಆಯಾಮದ ಆಕೃತಿಗಳು, ಕೋನಗಳು, ರೇಖೆಗಳು, ತ್ರಿಭುಜ, ಚತುರ್ಭುಜಗಳು, ಬಹುಭುಜಾಕೃತಿಗಳು, ಸುತ್ತಳತೆ ಮತ್ತು ವಿಸ್ತೀರ್ಣ, ಸ್ವಯಂಸಿದ್ಧಗಳು, ಆಧಾರ ಪ್ರತಿಜ್ಞೆಗಳು, ಸಮಮಿತಿ, ಯೂಕ್ಲಿಡ್ ರೇಖಾಗಣಿತ, ಹೇರಾನನ ಸೂತ್ರ

## 6. ಅಭ್ಯಾಸ ಪುಸ್ತಕವನ್ನು ಯಾವಾಗ ಮತ್ತು ಎಲ್ಲಿ ಬಳಸಬೇಕು?

- ಪ್ರತಿ ಘಟಕ ಮುಗಿದ ನಂತರ ಸಂಬಂಧಿಸಿದ ಅಭ್ಯಾಸ ಪುಸ್ತಕದ ಚಟುವಟಿಕೆಗಳನ್ನು ಮಾಡಿಸುವುದು.
- ಅಭ್ಯಾಸ ಪುಸ್ತಕವು ಪಠ್ಯಪುಸ್ತಕಕ್ಕೆ ಪೂರಕವಾಗಿರುವುದರಿಂದ ಸಂಬಂಧಿಸಿದ ವಿಷಯಗಳಿಗೆ ನಿಗದಿ ಪಡಿಸಿದ ಅವಧಿಗಳಲ್ಲಿ ಬಳಸಬಹುದು. (ಶಿಕ್ಷಕರ ಸಹಾಯದಿಂದ ನಡೆಸುವ ಚಟುವಟಿಕೆಗಳಾಗಿದ್ದಲ್ಲಿ)
- ಸ್ವ–ಕಲಿಕೆಯಿಂದ ಪೂರ್ಣಗೊಳಿಸಬಹುದಾದ ಚಟುವಟಿಕೆಗಳನ್ನು ಶಾಲೆಯ ವಿರಾಮದ ವೇಳೆಯಲ್ಲಿ ಅಥವಾ ಮನೆಯಲ್ಲಿ ಪೂರ್ಣಗೊಳಿಸಬಹುದಾಗಿದೆ.
- ವಿದ್ಯಾರ್ಥಿಗಳ ಗುಂಪು ಕಲಿಕೆ ನಡೆಯುವ ಸಂದರ್ಭಗಳಲ್ಲಿ ಅಭ್ಯಾಸ ಪುಸ್ತಕವನ್ನು ಬಳಸಬಹುದು.
- ಅಭ್ಯಾಸ ಪುಸ್ತಕವನ್ನು ರೂಪಣಾತ್ಮಕ ಮೌಲ್ಯಮಾಪನವನ್ನು ಮಾಡುವ ಸಮಯದಲ್ಲಿ ಬಳಸಬಹುದಾಗಿದೆ.
- ಅಭ್ಯಾಸ ಪುಸ್ತಕವು ಸ್ವ–ಕಲಿಕೆ, ಸ್ವವೇಗ ಹಾಗೂ ಸ್ವಪ್ರೇರಣೆಯಿಂದ ಮಾಡಬೇಕಾಗಿರುವುದರಿಂದ ಮಕ್ಕಳ ಆಸಕ್ತಿಗನುಗುಣವಾಗಿ ಬಳಸಬಹುದಾಗಿದೆ.

## 7. ಅಭ್ಯಾಸ ಪುಸ್ತಕಗಳನ್ನು ಹೇಗೆ ಬಳಸಬೇಕು?

- ಅಭ್ಯಾಸ ಪುಸ್ತಕವನ್ನು ಮಕ್ಕಳು ಯಾಂತ್ರಿಕವಾಗಿ ಬಳಸದಂತೆ ಗಮನಿಸುವುದು ಅತಿ ಮುಖ್ಯ.
- ಅಭ್ಯಾಸ ಪುಸ್ತಕಗಳಲ್ಲಿನ ಸೂಚನೆಗಳನ್ನು ವಿದ್ಯಾರ್ಥಿಗಳಿಗೆ ಸ್ಪಷ್ಟವಾಗಿ ಅರ್ಥೈಸುವುದು.
- ಅಭ್ಯಾಸದಲ್ಲಿರುವ ಸೂಚನೆಗಳನ್ನು ಅನುಸರಿಸಿ ಚಟುವಟಿಕೆಗಳನ್ನು ನಿರ್ವಹಿಸುವುದು.
- ಅಭ್ಯಾಸ ಪುಸ್ತಕಗಳನ್ನು ಪಠ್ಯವಿಷಯಕ್ಕೆ ಪೂರಕವಾಗಿ, ಪುನರಾವರ್ತನೆಗಾಗಿ ಮತ್ತು ಮೌಲ್ಯಮಾಪನ ದೃಢೀಕರಣಕ್ಕಾಗಿ ಬಳಸುವುದು.
- ಶಿಕ್ಷಕರು ಅಭ್ಯಾಸ ಪುಸ್ತಕದಲ್ಲಿನ ಚಟುವಟಿಕೆಗಳನ್ನು ಗೃಹಪಾಠವಾಗಿ ಬಳಸುವುದು.
- ವಿದ್ಯಾರ್ಥಿಗಳ ಸ್ವವೇಗ, ಸ್ವಕಲಿಕೆ, ಸ್ವಪ್ರೇರಣೆ ಕಲಿಕೆಗೆ ಶಿಕ್ಷಕರು ಅನುವು ಮಾಡಿಕೊಡುವುದು.
- ಅಭ್ಯಾಸ ಪುಸ್ತಕದ ಚಟುವಟಿಕೆಗಳನ್ನು ಕ್ರಮಾನುಗತವಾಗಿ ಬಳಸುವುದು.



Scanned by CamScanner

- ಅಭ್ಯಾಸ ಪುಸ್ತಕದ ಭಾಗ 1 ರ ಚಟುವಟಿಕೆಗಳನ್ನು ನಿಗದಿತ ಅವಧಿಯೊಳಗೆ ಮಕ್ಕಳಿಂದ ಮಾಡಿಸಿ ಕಲಿಕೆಯ ಮಟ್ಟವನ್ನು ದೃಢೀಕರಿಸಿಕೊಳ್ಳುವುದು ಹಾಗೂ ಭಾಗ 2 ನ್ನು ನವೆಂಬರ್ ತಿಂಗಳಿನಿಂದ ಪಠ್ಯಪುಸ್ತಕದ ಬೋಧನೆಯ ಜೊತೆಜೊತೆಯಾಗಿ ನಿರ್ವಹಿಸುವುದು.
- ಪ್ರತಿ ಘಟಕದ/ಘಟಕಾಂಶದ/ಸಾಮರ್ಥ್ಯದ ಪಠ್ಯ ಬೋಧನೆ ಆದ ನಂತರ ಮಕ್ಕಳೇ ಸ್ವತಃ ತೊಡಗಿಸಿಕೊಂಡು ಸಂಬಂಧಿಸಿದ ಚಟುವಟಿಕೆಗಳನ್ನು ಮಾಡುವಂತೆ ಸ್ಪಷ್ಟವಾದ ತಿಳುವಳಿಕೆ ನೀಡುವುದು.
- ಅಭ್ಯಾಸ ಪುಸ್ತಕಗಳ ಬಳಕೆಯಿಂದ ಮಕ್ಕಳಲ್ಲಿ ಉಂಟಾದ ಶೈಕ್ಷಣಿಕ ಪ್ರಗತಿಯ ಬಗ್ಗೆ ನಿಗದಿತ ನಮೂನೆಯಲ್ಲಿ ಸೂಕ್ತ ದಾಖಲೀಕರಣ ಮಾಡಬೇಕು.
- ಅಭ್ಯಾಸ ಪುಸ್ತಕಗಳಲ್ಲಿನ ಎಲ್ಲಾ ಚಟುವಟಿಕೆಗಳನ್ನು ಮಕ್ಕಳಿಂದಲೇ ಮಾಡಿಸಬೇಕು.

## 8. ಅಭ್ಯಾಸ ಪುಸ್ತಕಗಳನ್ನು ಬಳಸುವ ಬಗ್ಗೆ ವಿದ್ಯಾರ್ಥಿಗಳಿಗೆ ಸೂಚನೆಗಳು

- ಅಭ್ಯಾಸ ಪುಸ್ತಕದಲ್ಲಿನ ಚಟುವಟಿಕೆಗಳನ್ನು ಪೂರ್ಣಗೊಳಿಸುವುದು.
- ಅಭ್ಯಾಸ ಪುಸ್ತಕವನ್ನು ಕಲಿಕೆಯ ಮೆಟ್ಟಿಲುಗಳನ್ನಾಗಿ ಬಳಸುವುದು.
- ಅಭ್ಯಾಸ ಪುಸ್ತಕವನ್ನು ಶಾಲೆಯಲ್ಲಿನ ಕಲಿಕಾ ಪ್ರಕ್ರಿಯೆಗಳ ಜೊತೆಗೆ ಹಾಗೂ ಮನೆಗೆಲಸವಾಗಿ ಬಳಸುವುದು.
- ಅಭ್ಯಾಸ ಪುಸ್ತಕವನ್ನು ವಿದ್ಯಾರ್ಥಿಗಳೇ ಸ್ವತಃ ಪೂರ್ಣಗೊಳಿಸುವುದು. ಸಮಸ್ಯೆಗಳು/ ಅನುಮಾನಗಳು ಎದುರಾದಲ್ಲಿ ಗೆಳೆಯರ/ ಪೋಷಕರ/ ಹಿರಿಯರ/ ಶಿಕ್ಷಕರ ಮಾರ್ಗದರ್ಶನ ಪಡೆಯುವುದು.
- ಅಭ್ಯಾಸ ಪುಸ್ತಕದಲ್ಲಿರುವ ಚಟುವಟಿಕೆಗಳನ್ನು ಮಾಡಲು ಹೆಚ್ಚಿನ ಮಾಹಿತಿಯ ಅಗತ್ಯವಿದ್ದಲ್ಲಿ ದಿನಪತ್ರಿಕೆ, ಮಾಸಪತ್ರಿಕೆ, ನಿಯತಕಾಲಿಕೆ, ವಿದ್ಯಾರ್ಥಿ ಸಂಚಿಕೆಗಳು, ಗ್ರಂಥಾಲಯದ ಪುಸ್ತಕಗಳನ್ನು ಬಳಸುವುದು ಹಾಗೂ ಲಭ್ಯವಿದ್ದೆಡೆ ಅಂತರ್ಜಾಲದ ಸಹಾಯವನ್ನು ಪಡೆಯುವುದು.
- ಅಭ್ಯಾಸ ಪುಸ್ತಕದಲ್ಲಿನ ಪ್ರಶ್ನೆಗಳಂತೆ ವಿದ್ಯಾರ್ಥಿಗಳೇ ಸ್ವತಃ ಪ್ರಶ್ನೆಗಳನ್ನು ರಚಿಸಿಕೊಂಡು ಉತ್ತರಿಸಲು ಪ್ರಯತ್ನಿಸುವುದು.
- ಪ್ರತಿ ಅಭ್ಯಾಸವನ್ನು ಪೂರ್ಣಗೊಳಿಸಿದ ನಂತರ ಶಿಕ್ಷಕರ ಹಾಗೂ ಪೋಷಕರ ಗಮನಕ್ಕೆ ತಂದು ಸಹಿ ಪಡೆಯುವುದು.

## 9. ಅಭ್ಯಾಸ ಪುಸ್ತಕಗಳನ್ನು ಬಳಸುವ ಬಗ್ಗೆ ಶಿಕ್ಷಕರಿಗೆ ಸೂಚನೆಗಳು

- ಅಭ್ಯಾಸ ಪುಸ್ತಕದ ಆರಂಭದಲ್ಲಿರುವ ಆಶಯ ನುಡಿ, ಮುನ್ನುಡಿ ಹಾಗೂ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಅಂಶಗಳನ್ನು ಗಮನವಿಟ್ಟು ಓದಿ ಅರ್ಥೈಸಿಕೊಳ್ಳುವುದು.
- ಅಭ್ಯಾಸ ಪುಸ್ತಕ ಭಾಗ – 1 ಮೊದಲ ಅರ್ಧ ವರ್ಷಕ್ಕೆ ಮತ್ತು ಅಭ್ಯಾಸ ಪುಸ್ತಕ ಭಾಗ–2 ಎರಡನೆ ಅರ್ಧ ವರ್ಷಕ್ಕೆ ಸಮರ್ಪಕವಾಗಿ ಬಳಸುವುದು.



Scanned by CamScanner

- ಅಭ್ಯಾಸ ಪುಸ್ತಕದ ಎಲ್ಲಾ ಚಟುವಟಿಕೆಗಳು/ ಸಮಸ್ಯೆಗಳು ವಿದ್ಯಾರ್ಥಿಗಳ ಕಲಿಕೆಗೆ ಪೂರಕವಾಗಿರುವುದರಿಂದ ಕಲಿಕೆಗೆ ಹೆಚ್ಚು ಒತ್ತು ಕೊಡುವುದು.
- ಅಭ್ಯಾಸ ಪುಸ್ತಕವನ್ನು ವಿದ್ಯಾರ್ಥಿಗಳು ಸ್ವತಃ ಪೂರ್ಣಗೊಳಿಸಲು ಪ್ರೇರಣೆ ನೀಡುವುದು ಹಾಗೂ ಸ್ವಕಲಿಕೆಗೆ ಹೆಚ್ಚು ಒತ್ತು ನೀಡುವುದು.
- ಅಭ್ಯಾಸ ಪುಸ್ತಕದ ಚಟುವಟಿಕೆಗಳನ್ನು ಮಾಡುವಾಗ ವಿದ್ಯಾರ್ಥಿಗಳಿಗೆ ಸಮಸ್ಯೆ ಎನಿಸಿದಲ್ಲಿ ಅಗತ್ಯಕ್ಕೆ ತಕ್ಕಂತೆ ಮಾತ್ರ ಮಾರ್ಗದರ್ಶನ ನೀಡುವುದು.
- ಅಭ್ಯಾಸ ಪುಸ್ತಕದ ಚಟುವಟಿಕೆಗಳನ್ನು ಪೂರ್ಣಗೊಳಿಸಲು ಸಮಸ್ಯೆ ಎನಿಸಿದಲ್ಲಿ ಗೆಳೆಯರ / ಹಿರಿಯರ/ ಪೋಷಕರ ಸಹಾಯವನ್ನು ಪಡೆಯಲು ತಿಳಿಸುವುದು.
- ಅಭ್ಯಾಸ ಪುಸ್ತಕದ ಚಟುವಟಿಕೆಗಳನ್ನು ಗೃಹಪಾಠಕ್ಕೆ, ಕಲಿಕೆಯ ದೃಢೀಕರಣಕ್ಕೆ ಬಳಸಿಕೊಳ್ಳುವುದು.
- ಅಭ್ಯಾಸ ಪುಸ್ತಕದ ಚಟುವಟಿಕೆಗಳು ವಿದ್ಯಾರ್ಥಿಗಳ ಕಲಿಕೆಯ ಪರಿಹಾರ ಬೋಧನೆ ಹಾಗೂ ಮತ್ತಿತರ ಕಲಿಕಾ ಆಯಾಮವಾಗಿ ಬಳಸುವುದು.
- ಅಭ್ಯಾಸ ಪುಸ್ತಕದ ಪ್ರತಿ ಅಭ್ಯಾಸವನ್ನು ತರಗತಿಯ ಕಲಿಕೆಯೊಂದಿಗೆ ಸಮೀಕರಿಸಿ ಖಚಿತಪಡಿಸುವುದು.
- ಪ್ರತಿ ವಿದ್ಯಾರ್ಥಿಯ ಪ್ರಗತಿಯನ್ನು ಸಂಬಂಧಿಸಿದ ಪೋಷಕರೊಂದಿಗೆ ಚರ್ಚಿಸುವುದು.
- ಅಭ್ಯಾಸ ಪುಸ್ತಕದಲ್ಲಿರುವ ಕಿರುಪರೀಕ್ಷೆ/ ನಾನೆಷ್ಟು ಕಲಿತಿರುವೆ? ಇವುಗಳನ್ನು ತಮ್ಮ ಸಮ್ಮುಖದಲ್ಲಿಯೇ ನಡೆಯುವಂತೆ ನೋಡಿಕೊಂಡು ಪರಿಶೀಲಿಸಿ, ಕಲಿಕೆಯ ದೃಢೀಕರಣ ಮಾಡುವುದು.
- ಪ್ರತಿ ತಿಂಗಳ ಮೊದಲನೆಯ ಶುಕ್ರವಾರದಂದು ಶಾಲೆಯಲ್ಲಿ ಎಲ್ಲಾ ಮಕ್ಕಳ ಅಭ್ಯಾಸ ಪುಸ್ತಕಗಳ ಪ್ರದರ್ಶನವನ್ನು ಏರ್ಪಡಿಸುವುದು. ಅಭ್ಯಾಸ ಪುಸ್ತಕದಲ್ಲಿನ ಚಟುವಟಿಕೆಗಳನ್ನು ಉತ್ತಮವಾಗಿ ನಿರ್ವಹಿಸಿದ ವಿದ್ಯಾರ್ಥಿಯನ್ನು ಸೂಕ್ತವಾಗಿ ಪ್ರಶಂಸಿಸುವುದು.
- ಅಭ್ಯಾಸ ಪುಸ್ತಕದ ಅವಲೋಕನ ಹಾಗೂ ಸಮಸ್ಯೆಗಳ ಬಗ್ಗೆ ಚರ್ಚಿಸಿ ಪ್ರತಿ ವಿಷಯಕ್ಕೆ ಸಂಬಂಧಿಸಿದಂತೆ ವಾರದಲ್ಲಿ ಒಂದು ಅವಧಿಯನ್ನಾದರೂ ಮೀಸಲಿಡುವುದು.
- ಪಠ್ಯಪುಸ್ತಕದಲ್ಲಿನ ವಿಷಯಗಳನ್ನು ಬೋಧಿಸುವುದರ ಜೊತೆಗೆ ಈ ಅಭ್ಯಾಸ ಪುಸ್ತಕದಲ್ಲಿನ ಚಟುವಟಿಕೆಗಳನ್ನು ಮಾಡಿಸುವುದು.
- ಅಭ್ಯಾಸ ಪುಸ್ತಕದಲ್ಲಿನ ಕ್ಲಿಷ್ಟವೆನಿಸಿದ ಚಟುವಟಿಕೆಗಳನ್ನು ತರಗತಿಯಲ್ಲಿನ ವಿದ್ಯಾರ್ಥಿಗಳನ್ನು ತಂಡವಾಗಿ ಮಾಡಿ, ಗುಂಪಿನಲ್ಲಿ ಚರ್ಚಿಸಿ ಅನಂತರ ಅಭ್ಯಾಸ ಪುಸ್ತಕದಲ್ಲಿ ಬರೆಯುವಂತೆ ಮಾರ್ಗದರ್ಶನ ನೀಡುವುದು.
- ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿಗಳ ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
- ವಿವಿಧ ಚಟುವಟಿಕೆಗಳಿಂದ ಕಲಿತ ಜ್ಞಾನ ಹಾಗೂ ಕೌಶಲವನ್ನು ನಿತ್ಯಜೀವನದಲ್ಲಿ ಅಳವಡಿಸಿಕೊಳ್ಳುವಂತೆ ಪ್ರೇರೇಪಿಸುವುದು.



Scanned by CamScanner

## 10. ಅಭ್ಯಾಸ ಪುಸ್ತಕಗಳನ್ನು ಬಳಸುವ ಬಗ್ಗೆ ಪೋಷಕರಿಗೆ ಸೂಚನೆಗಳು

- ಪ್ರತಿದಿನ ಮಗುವಿನ ಕಲಿಕಾ ಪ್ರಗತಿಯನ್ನು ಗಮನಿಸುವುದು.
- ಮಗುವಿನ ಕಲಿಕೆಯನ್ನು ನಿರಂತರವಾಗಿ ಪ್ರೋತ್ಸಾಹಿಸುವುದು.
- ಶಿಕ್ಷಕರನ್ನು ಭೇಟಿ ಮಾಡಿ ಮಗುವಿನ ಕಲಿಕೆಯ ಬಗ್ಗೆ ಚರ್ಚಿಸುವುದು.
- ಅಭ್ಯಾಸ ಪುಸ್ತಕದ ಚಟುವಟಿಕೆಗಳನ್ನು ನಿರ್ವಹಿಸಲು ಮಗುವಿಗೆ ಸಹಕರಿಸುವುದು.
- ಅಭ್ಯಾಸ ಪುಸ್ತಕದಲ್ಲಿರುವ ಎಲ್ಲಾ ಚಟುವಟಿಕೆಗಳನ್ನು ಪೂರ್ಣಗೊಳಿಸುವಂತೆ ಪ್ರೇರೇಪಿಸುವುದು.
- ಅಭ್ಯಾಸ ಪುಸ್ತಕವನ್ನು ಶಿಕ್ಷಕರು ಪರಿಶೀಲಿಸಿದ ನಂತರ ಸಹಿಮಾಡಿ ಮಗುವಿಗೆ ಪ್ರೋತ್ಸಾಹ ನೀಡುವುದು.

## 11. ಅಭ್ಯಾಸ ಪುಸ್ತಕವನ್ನು ಮೌಲ್ಯಮಾಪನ ಪ್ರಕ್ರಿಯೆಯಲ್ಲಿ ಅಳವಡಿಸುವುದು ಹೇಗೆ?

ಪ್ರತಿ ಘಟಕದ ನಂತರ ಅಭ್ಯಾಸ ಪುಸ್ತಕದಲ್ಲಿ ನೀಡಿದ ಕಿರುಪರೀಕ್ಷೆಯನ್ನು ಶಿಕ್ಷಕರು ವಿದ್ಯಾರ್ಥಿಯ ಕಲಿಕಾಮಟ್ಟವನ್ನು ಅಳೆಯುವ ಒಂದು ಸಾಧನವಾಗಿ ಬಳಸಬಹುದು. ಈ ಕಿರು ಪರೀಕ್ಷೆಯನ್ನು ಶಿಕ್ಷಕರು ತರಗತಿಯಲ್ಲಿ ಒಂದು ನಿಗದಿತ ಅವಧಿಯಲ್ಲಿ ನಡೆಸಿ ಮೌಲ್ಯಮಾಪನ ಮಾಡಬೇಕು. ಈ ಮೌಲ್ಯಮಾಪನವನ್ನು ರೂಪಣಾತ್ಮಕ ಮೌಲ್ಯಮಾಪನಕ್ಕೆ ಪೂರಕವಾಗಿ ಬಳಸಬಹುದು.

ಅಭ್ಯಾಸ ಪುಸ್ತಕದ ಕಿರು ಪರೀಕ್ಷೆಯ ಪ್ರಶ್ನೆಗಳು ಮೊದಲೇ ಮಕ್ಕಳಿಗೆ ತಿಳಿದಿರುವುದರಿಂದ ನಿಖರವಾದ ಮೌಲ್ಯಮಾಪನವಾಗುವುದಿಲ್ಲ ಎಂದು ಶಿಕ್ಷಕರಿಗೆ ಅನಿಸಿದರೆ, ಈ ಕಿರುಪರೀಕ್ಷೆಯ ಮೌಲ್ಯಮಾಪನವನ್ನು ಪೂರಕವಾಗಿ ಬಳಸಿರಿ. ರೂಪಣಾತ್ಮಕ ಮೌಲ್ಯಮಾಪನಕ್ಕೆ ಇನ್ನೊಂದು ಕಿರುಪರೀಕ್ಷೆ ಅಥವಾ ಮೌಲ್ಯಮಾಪನದ ಇತರ ವಿಧಾನವನ್ನು ಶಿಕ್ಷಕರು ಬಳಸಬಹುದು. ಈ ಸಮಯದಲ್ಲಿ ಅಭ್ಯಾಸ ಪುಸ್ತಕದ ಚಟುವಟಿಕೆಗಳನ್ನು/ ಪ್ರಶ್ನೆಗಳನ್ನು/ ಸಮಸ್ಯೆಗಳನ್ನು ಶಿಕ್ಷಕರು ಬಳಸಬಹುದಾಗಿದೆ.

## 12. ಅಭ್ಯಾಸ ಪುಸ್ತಕಗಳ ಬಳಕೆ ಮತ್ತು ಮೌಲ್ಯಮಾಪನ ಕುರಿತು ಮಾರ್ಗದರ್ಶಕ ಅಧಿಕಾರಿಗಳಿಗೆ ಸೂಚನೆಗಳು

### ಅ] ಮುಖ್ಯ ಶಿಕ್ಷಕರಿಗೆ ಸೂಚನೆಗಳು

ಮುಖ್ಯಶಿಕ್ಷಕರು ಅಭ್ಯಾಸ ಪುಸ್ತಕವನ್ನು ಮಕ್ಕಳು ಸಮರ್ಪಕವಾಗಿ ಬಳಕೆ ಮಾಡುತ್ತಿರುವರೇ? ಕಿರು ಪರೀಕ್ಷೆ ಸೇರಿದಂತೆ ಮಕ್ಕಳಿಗೆ ಶಿಕ್ಷಕರು ಸರಿಯಾಗಿ ಮಾರ್ಗದರ್ಶನ ಮಾಡುತ್ತಿರುವರೇ? ಎಂಬುದನ್ನು ಮುಖ್ಯ ಶಿಕ್ಷಕರು ಕಡ್ಡಾಯವಾಗಿ ಪರಿಶೀಲಿಸುವುದು.

ಪ್ರತಿ ತಿಂಗಳು ನಿಗದಿತ ದಿನದಂದು ಅಭ್ಯಾಸ ಪುಸ್ತಕಗಳ ಪ್ರದರ್ಶನ ನಡೆಯುವಂತೆ ಕ್ರಮ ವಹಿಸುವುದು. ಉತ್ತಮ ನಿರ್ವಹಣೆ ತೋರಿದ ಮಕ್ಕಳಿಗೆ ಮುಖ್ಯ ಶಿಕ್ಷಕರು ಬಹುಮಾನ ಅಥವಾ ಗುಡ್ ಎಂದು ಅಭ್ಯಾಸ ಪುಸ್ತಕದಲ್ಲಿ ಬರೆದು ಪ್ರಶಂಸಿಸಬೇಕು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ಕಲಿಕೆಗೆ ನೆರವಾದ ಸಹಪಾಠಿಯನ್ನು ಗುರುತಿಸಿ ಅಭಿನಂದಿಸಬೇಕು.

ಶಿಕ್ಷಕರು ಪ್ರತಿ ಘಟಕದ ನಂತರ ಆ್ಯಪ್ (ತಂತ್ರಾಂಶ)ನಲ್ಲಿ ಮಾಹಿತಿಯನ್ನು ಭರ್ತಿಮಾಡಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು. ಅಭ್ಯಾಸ ಪುಸ್ತಕಗಳನ್ನು ಮಕ್ಕಳು ಬಳಕೆ ಮಾಡುವ ಕುರಿತು ಎಸ್.ಡಿ.ಎಮ್.ಸಿ. ಸಭೆಗಳಲ್ಲಿ ಹಾಗೂ ಪಾಲಕರ/ ಮಾತೆಯರ ಸಭೆಗಳಲ್ಲಿ ಪೋಷಕರ ಪಾತ್ರ, ಜವಾಬ್ದಾರಿ ಹಾಗೂ ಮಾರ್ಗದರ್ಶನ ಕುರಿತು ಸರಿಯಾದ ಮಾಹಿತಿ ನೀಡಿ ಆ ಕುರಿತು ದಾಖಲೆಯನ್ನು ನಿರ್ವಹಿಸಿ, ಅಧಿಕಾರಿಗಳ ಸಂದರ್ಶನದ ಸಮಯದಲ್ಲಿ ಅದನ್ನು ಅವರ ಗಮನಕ್ಕೆ ತರಬೇಕು.



Scanned by CamScanner

ಬ] ಕ್ಲಸ್ಟರ್/ ಬ್ಲಾಕ್/ ಜಿಲ್ಲಾ/ ರಾಜ್ಯ ಹಂತದ ಅಧಿಕಾರಿಗಳಿಗೆ ಸೂಚನೆಗಳು.

ಶಿಕ್ಷಣ ಇಲಾಖೆಯ ಮೇಲುಸ್ತುವಾರಿಯ ಎಲ್ಲಾ ಹಂತದ ಅಧಿಕಾರಿಗಳು ಮಕ್ಕಳು ಸ್ವತಃ ಅಭ್ಯಾಸ ಪುಸ್ತಕಗಳನ್ನು ಬಳಕೆ ಮಾಡುತ್ತಿರುವುದನ್ನು ಖಚಿತಪಡಿಸಿಕೊಳ್ಳಬೇಕು. ಶಿಕ್ಷಕರು ಪ್ರತಿ ಘಟಕದ ನಂತರ ಕಿರು ಪರೀಕ್ಷೆ ನಡೆಸಿ ಮೌಲ್ಯಮಾಪನ ಮಾಡಿರುವುದನ್ನು ಗಮನಿಸಬೇಕು. ಪ್ರತಿ ಘಟಕದ ನಂತರ ಶಿಕ್ಷಕರು ಮತ್ತು ಪೋಷಕರು ಸಹಿ ಮಾಡಿರುವುದು ಅವಲೋಕಿಸಬೇಕು. ಪೋಷಕರಿಗೆ ಅಭ್ಯಾಸ ಪುಸ್ತಕ ಕುರಿತು ಸರಿಯಾದ ಮಾಹಿತಿ ತಲುಪಿರುವುದನ್ನು ಖಾತರಿಪಡಿಸಿಕೊಳ್ಳಬೇಕು. ಶಿಕ್ಷಕರು ಅಭ್ಯಾಸ ಪುಸ್ತಕ ಬಳಕೆ ಕುರಿತ ಆ್ಯಪ್ (ತಂತ್ರಾಂಶ) ಬಳಸುತ್ತಿರುವುದನ್ನು ಗಮನಿಸಿ ಸಲಹೆ ಸೂಚನೆ ನೀಡಬೇಕು.

ಸಂದರ್ಶಕ ಅಧಿಕಾರಿಗಳು ತಾವು ಸಂದರ್ಶಿಸಿದ ಶಾಲೆಯಲ್ಲಿನ ಮಕ್ಕಳ ಅಭ್ಯಾಸ ಪುಸ್ತಕ ಬಳಕೆ ಕುರಿತು ತಮ್ಮ ಮೌಲ್ಯಮಾಪನ ನಮೂನೆಯನ್ನು ಆ್ಯಪ್ (ತಂತ್ರಾಂಶ)ನಲ್ಲಿ ಕಡ್ಡಾಯವಾಗಿ ಭರ್ತಿ ಮಾಡಬೇಕು. ಸಂದರ್ಶನ ವರದಿಯಲ್ಲಿ ಅಭ್ಯಾಸ ಪುಸ್ತಕ ಬಳಕೆ ಮತ್ತು ಮೌಲ್ಯಮಾಪನದ ಬಗ್ಗೆ ಕಡ್ಡಾಯವಾಗಿ ನಮೂದಿಸಬೇಕು.

## 13. ಅಭ್ಯಾಸ ಪುಸ್ತಕಗಳ ಬಳಕೆಯ ಬಗ್ಗೆ ಆ್ಯಪ್ (ತಂತ್ರಾಂಶ) ಬಳಸುವ ಕುರಿತು ಸೂಚನೆಗಳು

ಅಭ್ಯಾಸ ಪುಸ್ತಕಗಳ ಸಮರ್ಪಕ ಬಳಕೆ ಹಾಗೂ ಕಲಿಕಾ ಪ್ರಗತಿಯನ್ನು ದಾಖಲಿಸಲು ಹಾಗೂ ವಿಶ್ಲೇಷಿಸುವುದಕ್ಕಾಗಿ ಇಲಾಖೆಯು ಆ್ಯಪ್ (ತಂತ್ರಾಂಶ) ರೂಪಿಸಿದೆ. ಶಿಕ್ಷಣ ಇಲಾಖೆ ಅಭಿವೃದ್ಧಿಪಡಿಸಿರುವ ಆ್ಯಪ್ (ತಂತ್ರಾಂಶ)ವನ್ನು 4 ರಿಂದ 9 ನೇ ತರಗತಿಯ ಕನ್ನಡ, ಗಣಿತ ಮತ್ತು ಇಂಗ್ಲಿಷ್ ಶಿಕ್ಷಕರು ಹಾಗೂ ಮೇಲುಸ್ತುವಾರಿಯ ಎಲ್ಲಾ ಹಂತದ ಅಧಿಕಾರಿಗಳು ತಮ್ಮ ಮೊಬೈಲ್‌ನಲ್ಲಿ ಇನ್‌ಸ್ಟಾಲ್ ಮಾಡಿಕೊಳ್ಳತಕ್ಕದ್ದು. ಅಭ್ಯಾಸ ಪುಸ್ತಕದ ಬಳಕೆಯ ವಿವರಗಳನ್ನು ನಿಗದಿತ ಮಾಹಿತಿಯನ್ನು ಸಂಬಂಧಿಸಿದವರೆಲ್ಲಾ ಕಡ್ಡಾಯವಾಗಿ ಭರ್ತಿ ಮಾಡಬೇಕು. ಈ ಆ್ಯಪ್ (ತಂತ್ರಾಂಶ)ವನ್ನು ಭರ್ತಿ ಮಾಡುವುದರಿಂದ ಮೇಲಿನ ಹಂತದ ಅಧಿಕಾರಿಗಳಿಗೆ ಅಭ್ಯಾಸ ಪುಸ್ತಕದ ಬಳಕೆ ಕುರಿತ ಮಾಹಿತಿ ಸೂಕ್ತ ಸಮಯದಲ್ಲಿ ತಲುಪುವುದರಿಂದ ಶಾಲೆಗಳ ಕಲಿಕಾ ಬಲವರ್ಧನಾ ಚಟುವಟಿಕೆಗಳ ಅಂಕಿ-ಅಂಶಗಳು ತಕ್ಷಣ ಕೈಗೆಟುಕುವಂತಾಗುತ್ತದೆ.

### ಶಿಕ್ಷಕರು ಆ್ಯಪ್ (ತಂತ್ರಾಂಶ) ಬಳಸುವ ಬಗ್ಗೆ

ಮಕ್ಕಳ ಅಭ್ಯಾಸ ಪುಸ್ತಕ ಬಳಕೆಯ ಕುರಿತಾಗಿ ಶಿಕ್ಷಕರು ಆ್ಯಪ್ (ತಂತ್ರಾಂಶ)ನಲ್ಲಿ ತಮಗೆ ನಿಗದಿ ಪಡಿಸಿದ ನಮೂನೆಯನ್ನು ಮಾತ್ರ ಪ್ರತಿ ಘಟಕದ ನಂತರ ಭರ್ತಿ ಮಾಡಬೇಕು. ಅದರಲ್ಲಿ ಜಿಲ್ಲೆ, ಬ್ಲಾಕ್, ಕ್ಲಸ್ಟರ್, ಶಾಲೆ ಹೆಸರು ಹಾಗೂ ಶಾಲೆ ಡೈಸ್ ನಂಬರ್ ಮತ್ತು ನಮೂನೆಯನ್ನು ತುಂಬುವ ದಿನಾಂಕವನ್ನು ಹಾಗೂ ತರಗತಿ, ವಿಷಯವನ್ನು ಮೊದಲಿಗೆ ತುಂಬಬೇಕು.

ಆವರೆಗೆ ನಿಗದಿಪಡಿಸಲಾದ ಪಾಠಗಳ ಮತ್ತು ಪೂರ್ಣಗೊಳಿಸಿದ ಪಾಠಗಳ ಸಂಖ್ಯೆ, ಪ್ರಸ್ತುತ ಘಟಕದ ಹೆಸರು ಹಾಗೂ ತರಗತಿಯ ಒಟ್ಟು ಮಕ್ಕಳ ಸಂಖ್ಯೆಯನ್ನು ನಮೂದಿಸಬೇಕು. ಅಭ್ಯಾಸ ಪುಸ್ತಕ ಪೂರ್ಣಗೊಳಿಸಿದ ಮಕ್ಕಳ ಸಂಖ್ಯೆಯನ್ನು ಅಧರಿಸಿ ಪೂರ್ಣ, ಭಾಗಶಃ, ಮಾಡಿಲ್ಲ ಎಂಬುದರಲ್ಲಿ ಮಕ್ಕಳ ಸಂಖ್ಯೆ ನಮೂದಿಸಬೇಕು. ನಿರೀಕ್ಷಿತ ಸಾಧನೆ ಶೇ.100 ಇದ್ದು ಅದಕ್ಕೆ ಸಾಧಿಸಿದ ಸಾಧನೆ ಅಂದರೆ ಶೇ. 100ರಷ್ಟು ಮಾಡಿದವರನ್ನು ಶೇಕಡಾಕ್ಕೆ ಪರಿವರ್ತಿಸಿ ಅದನ್ನು ಸಾಧನೆಯಲ್ಲಿ ನಮೂದಿಸಿ, ಕಡಿಮೆ ಸಾಧನೆಯಲ್ಲಿನ ಕೊರತೆ ಇತ್ಯಾದಿಗಳಿಗೆ ಶಿಕ್ಷಕರು ಕಾರಣಗಳನ್ನು ಭರ್ತಿ ಮಾಡಬೇಕು.



Scanned by CamScanner

**ಉಸ್ತುವಾರಿ ಅಧಿಕಾರಿಗಳು ಆ್ಯಪ್ (ತಂತ್ರಾಂಶ) ಬಳಸುವ ಬಗ್ಗೆ**

ಅಭ್ಯಾಸ ಪುಸ್ತಕ ಸಮರ್ಪಕ ಬಳಕೆ ಕುರಿತಂತೆ ಉಸ್ತುವಾರಿ ಅಧಿಕಾರಿಗಳು ಸಂದರ್ಶನ ಸಮಯದಲ್ಲಿ ಗಮನ ಹರಿಸಿ ಅದರ ಹಿಮ್ಮಾಹಿತಿಯನ್ನು ಆ್ಯಪ್ (ತಂತ್ರಾಂಶ)ದಲ್ಲಿ ತಮ್ಮ ಹಂತಕ್ಕೆ ನಿಗದಿಪಡಿಸಲಾದ ನಮೂನೆಯಲ್ಲಿ ಭರ್ತಿ ಮಾಡಬೇಕು.

ಅದರಲ್ಲಿ ಸಂದರ್ಶಕರ ಹೆಸರು, ಹುದ್ದೆ, ಜಿಲ್ಲೆ, ಬ್ಲಾಕ್, ಕ್ಲಸ್ಟರ್, ಶಾಲೆ ಹೆಸರು ಹಾಗೂ ಶಾಲೆ ಡೈಸ್ ನಂಬರ್ ಮತ್ತು ನಮೂನೆಯನ್ನು ತುಂಬುವ ದಿನಾಂಕವನ್ನು ಹಾಗೂ ಸಂದರ್ಶಿಸಿದ ತರಗತಿ, ದಾಖಲಾದ ಮಕ್ಕಳ ಸಂಖ್ಯೆ, ವಿಷಯವನ್ನು ಸಹ ಭರ್ತಿಬೇಕು.

ಆವರೆಗೆ ನಿಗದಿಪಡಿಸಲಾದ ಪಾಠಗಳ ಮತ್ತು ಪೂರ್ಣಗೊಳಿಸಿದ ಪಾಠಗಳ ಸಂಖ್ಯೆ, ಪ್ರಸ್ತುತ ಘಟಕದ ಹೆಸರು ಹಾಗೂ ಅಪೂರ್ಣವಾಗಿದ್ದರೆ ಕಾರಣಗಳು, ಅಭ್ಯಾಸ ಪುಸ್ತಕ ಲಭ್ಯವಿರುವ ಮಕ್ಕಳ ಸಂಖ್ಯೆ, ನಿಗದಿಪಡಿಸಿದಂತೆ ಅಭ್ಯಾಸ ಪುಸ್ತಕಗಳು ಬಳಕೆಯಾಗುತ್ತಿರುವುವೇ?. ವಿದ್ಯಾರ್ಥಿಗಳು ಸ್ವತಃ ಬಳಸುತ್ತಿರುವರೇ?, ಶಿಕ್ಷಕರು ಸಹಿ ಮಾಡಿರುವರೇ?, ಅಭ್ಯಾಸ ಪುಸ್ತಕ ಭರ್ತಿ ಮಾಡಿದ ಮಕ್ಕಳ ಪ್ರಮಾಣ, ಇವುಗಳನ್ನು ರ್‍ಯಾಂಡಂ ಆಗಿ ಕೆಲವು ಮಕ್ಕಳನ್ನು ಪ್ರಶ್ನಿಸಿ ಅದಕ್ಕೆ ಸಂಬಂಧಿಸಿದ ಕಾಲಂ ನಲ್ಲಿ ಉತ್ತರಿಸುವುದು. ಕೊನೆಗೆ ಆ ತರಗತಿ ಅಭ್ಯಾಸ ಪುಸ್ತಕಕ್ಕೆ ಸಂದರ್ಶಕರು ಅಂಕವನ್ನು ನೀಡಬೇಕು.

ಈ ಕುರಿತು ಹೆಚ್ಚಿನ ಮಾಹಿತಿ ಮುಂದಿನ ದಿನಗಳಲ್ಲಿ ನೀಡಲಾಗುವುದು. ಕ್ಲಸ್ಟರ್, ಬ್ಲಾಕ್ ಹಂತದ ಸಭೆ/ತರಬೇತಿಗಳಲ್ಲಿ ಆ್ಯಪ್ (ತಂತ್ರಾಂಶ) ಭರ್ತಿ ಮಾಡುವ ಬಗ್ಗೆ ಉಸ್ತುವಾರಿ ಅಧಿಕಾರಿಗಳು ಮಾಹಿತಿ ವಿನಿಮಯ ಮಾಡಿಕೊಳ್ಳುವುದು.

## 14. ವಿಷಯವಾರು ಅಭ್ಯಾಸ ಪುಸ್ತಕಗಳ ಬಳಕೆಯ ಕುರಿತು ಸೂಚನೆಗಳು

### 14.1 ಪ್ರಥಮ ಭಾಷೆ ಕನ್ನಡ

ಆತ್ಮೀಯ ಶಿಕ್ಷಕ ಬಂಧುಗಳೇ

4ನೆಯ ತರಗತಿಯಿಂದ 9ನೆಯ ತರಗತಿವರೆಗೆ 'ಅಭ್ಯಾಸ ಪುಸ್ತಕ' ಸಿದ್ಧಪಡಿಸಿದ್ದು ಅವು ಈಗ ನಿಮ್ಮ ಕೈಯಲ್ಲಿವೆ. ಈಗಾಗಲೇ ನಮಗೆ ತುಂಬಾ ಕೆಲಸವಿದೆ! ಈ ಅಭ್ಯಾಸ ಪುಸ್ತಕವನ್ನು ಯಾವಾಗ ಮಾಡಿಸಬೇಕು, ಯಾರು ಮಾಡಿಸಬೇಕು? ಎಂಬ ಚಿಂತೆ ನಿಮ್ಮನ್ನು ಕಾಡುತ್ತಿರಬಹುದು! ಯೋಚಿಸಬೇಡಿ!,

ಈ ಅಭ್ಯಾಸ ಪುಸ್ತಕಗಳನ್ನು ಮಕ್ಕಳ ಸ್ವಕಲಿಕೆಯ ದೃಷ್ಟಿಯಿಂದ ಸಿದ್ಧಪಡಿಸಲಾಗಿದೆ, ವಿದ್ಯಾರ್ಥಿಗಳು ಶಾಲೆ ಮತ್ತು ಮನೆಯಲ್ಲಿ ಬಿಡುವಿನ ವೇಳೆಯಲ್ಲಿ ಘಟಕವಾರು ನಿರ್ವಹಿಸುತ್ತಾರೆ. ನಮ್ಮದೇನು ಕೆಲಸ? ಎನ್ನುವಿರಾ! ನಿಮಗೂ ಸ್ವಲ್ಪ ಕೆಲಸವಿದೆ, ಅದೇನೆಂದರೆ ಪಠ್ಯಪುಸ್ತಕಗಳಿಗೆ ಪೂರಕವಾಗಿ ಮತ್ತು ಹೆಚ್ಚಿನ ಬರವಣಿಗೆಗಾಗಿ ಅಭ್ಯಾಸ ಪುಸ್ತಕಗಳನ್ನು ತಯಾರಿಸಿರುವುದರಿಂದ ಒಂದೊಂದು ಅಭ್ಯಾಸವನ್ನು ವಿದ್ಯಾರ್ಥಿಗಳು ಮಾಡಿದ ನಂತರ ಸರಿಯಾಗಿದೆಯೇ ಎಂದು ತಾವೂ ಪರಿಶೀಲಿಸಿ ತಪ್ಪುಗಳಿದ್ದರೆ ತಿದ್ದಿ ಸರಿಪಡಿಸಿ ಸಹಿ ಮಾಡಿರಿ. ವಿದ್ಯಾರ್ಥಿಗಳು ಅಭ್ಯಾಸ ಪುಸ್ತಕದಲ್ಲಿರುವ ಚಟುವಟಿಕೆಗಳನ್ನು ನಿರ್ವಹಣೆ ಮಾಡಲು ಪೋಷಕರ, ಸಹಪಾಠಿಗಳ ಸಹಾಯ ಪಡೆದುಕೊಳ್ಳುತ್ತಾರೆ. ಆದರೂ ಅಭ್ಯಾಸ ಪುಸ್ತಕಗಳು ಸಿ.ಸಿ.ಇ. ಗೆ ಪೂರಕವಾಗಿರುವುದರಿಂದ, ಗುಣಮಟ್ಟದ ಕಲಿಕೆಗೆ ಪ್ರೋತ್ಸಾಹ ನೀಡುವುದರಿಂದ ಇವುಗಳ ನಿರ್ವಹಣೆಗೆ ನಿಮ್ಮ ಮೇಲ್ವಿಚಾರಣೆ ಬಹುಮುಖ್ಯ ಎಂದು ನಿರೀಕ್ಷಿಸಲಾಗಿದೆ.



Scanned by CamScanner

- ಕನ್ನಡ ಅಭ್ಯಾಸ ಪುಸ್ತಕಗಳಲ್ಲಿ ಗದ್ಯ/ಪದ್ಯಗಳಿಗೆ ಪೂರಕವಾದ ಪ್ರಶ್ನೆಗಳನ್ನು ಸಾಧ್ಯವಾದಷ್ಟು ನೀಡಿರುವುದಿಲ್ಲ. ಭಾಷಾ ಬೆಳವಣಿಗೆಗೆ ಬೇಕಾದ ಚಟುವಟಿಕೆಗಳು ಮತ್ತು ಸರಳ ಕ್ರಿಯಾತ್ಮಕ ವ್ಯಾಕರಣಾಂಶಗಳಿಗೆ ಅನುಗುಣವಾಗಿ ಈ ಅಭ್ಯಾಸ ಪುಸ್ತಕವನ್ನು ತಯಾರಿಸಿದೆ. ಇವು ಆಯಾ ತರಗತಿ ವಿದ್ಯಾರ್ಥಿಗಳ ಬೌದ್ಧಿಕ ಮಟ್ಟಕ್ಕೆ ಸಂಬಂಧಿಸಿದಂತೆ ಪಠ್ಯಪುಸ್ತಕದಲ್ಲಿ ಅಳವಡಿಸಿರುವ ಸಾಮರ್ಥ್ಯಾನುಸಾರ ಸಂಯೋಜಿಸಲಾಗಿದೆ. ನೀವು ಎಂದಿನಂತೆ ವಾರ್ಷಿಕ ಪಾಠಗಳ ಹಂಚಿಕೆ, ಪಾಠಟಿಪ್ಪಣಿ, ಪಠ್ಯಪುಸ್ತಕ, ಪರಿಹಾರ ಬೋಧನೆ, ಕಲಿಕೋಪಕರಣಗಳ ಬಳಕೆಯ ಜೊತೆ ಜೊತೆಯಲ್ಲಿಯೇ, ಕಲಿಕೆಯನ್ನು ಅನುಕೂಲಿಸುವ ಸಂದರ್ಭದಲ್ಲಿ ಅಭ್ಯಾಸ ಪುಸ್ತಕಗಳ ಬಳಕೆಗೆ ಮಾರ್ಗದರ್ಶನ ನೀಡಿರಿ.
- ತರಗತಿಯಲ್ಲಿ ವಿದ್ಯಾರ್ಥಿಗಳನ್ನು ತಂಡಗಳಾಗಿ ಮಾಡಿ ಕ್ಲಿಷ್ಟವೆನಿಸಿದ ಚಟುವಟಿಕೆಗಳನ್ನು ಗುಂಪಿನಲ್ಲಿ ಚರ್ಚಿಸಿ ಅನಂತರ ಬರೆಯುವಂತೆ ಮಾರ್ಗದರ್ಶನ ನೀಡಿರಿ.
- ರೂಪಣಾತ್ಮಕ ಮೌಲ್ಯಮಾಪನ 1, 2, 3, ಮತ್ತು 4 ಹಾಗೂ ಸಂಕಲನಾತ್ಮಕ 1, 2 ರ ಮೌಲ್ಯಮಾಪನ ಸಂದರ್ಭದಲ್ಲಿ ಅಭ್ಯಾಸ ಪುಸ್ತಕದಲ್ಲಿರುವ ಚಟುವಟಿಕೆಗಳನ್ನು ಮೌಲ್ಯಮಾಪನ ಸಾಧನವಾಗಿ ಬಳಸಿಕೊಳ್ಳಬಹುದು.
- ಅಭ್ಯಾಸ ಪುಸ್ತಕಗಳು ಎರಡು ವಿಭಾಗಗಳಲ್ಲಿದ್ದು, ಸಂಕಲನಾತ್ಮಕ ಮೌಲ್ಯಮಾಪನ–1 ರವರೆಗೆ ಒಂದನೆಯ ಭಾಗ ಪೂರ್ಣಗೊಳಿಸಿ, ಆನಂತರ ಎರಡನೆಯ ಭಾಗವನ್ನು ಸಂಕಲನಾತ್ಮಕ ಮೌಲ್ಯಮಾಪನ 2ರವರೆಗೆ ಬಳಸಿರಿ. ಒಟ್ಟಾರೆಯಾಗಿ ಎರಡೂ ಅಭ್ಯಾಸ ಪುಸ್ತಕಗಳನ್ನು ನಿಗದಿತ ಶೈಕ್ಷಣಿಕ ವರ್ಷ ಮುಗಿಯುವ ವೇಳೆಗೆ ವಿದ್ಯಾರ್ಥಿಗಳೇ ನಿರ್ವಹಣೆ ಮಾಡುವಂತೆ ಯೋಜಿಸಿ.
- ವಿದ್ಯಾರ್ಥಿಗಳಿಗೆ ಹೆಚ್ಚಿನ ಮಾಹಿತಿ ಅಗತ್ಯವಿದ್ದಲ್ಲಿ ಗ್ರಂಥಾಲಯ ಪುಸ್ತಕಗಳನ್ನು ನೀಡಿರಿ ಹಾಗೂ ಮಾರ್ಗದರ್ಶನ ನೀಡಿರಿ ಅಥವಾ ತಂತ್ರಜ್ಞಾನವನ್ನು ಬಳಸಿಕೊಳ್ಳಲು ತಿಳಿಸಿರಿ.
- ಪ್ರತಿಭಾವಂತ ವಿದ್ಯಾರ್ಥಿಗಳು ಕೆಲವೇ ದಿನಗಳಲ್ಲಿ ಮುಗಿಸುವ ಸಾಧ್ಯತೆ ಇದೆ, ಆ ರೀತಿ ಆಗುವುದು ಬೇಡ. ಆಯಾ ಗದ್ಯ/ಪದ್ಯಗಳ ಕಲಿಕಾ ಸಂದರ್ಭದಲ್ಲಿ ಬಳಸುವಂತೆ ಸಲಹೆ ನೀಡಿರಿ.
- ಅಭ್ಯಾಸ ಪುಸ್ತಕದಲ್ಲಿನ ಚಟುವಟಿಕೆಗಳನ್ನು ವಿದ್ಯಾರ್ಥಿಗಳ ಜ್ಞಾನ, ತಿಳುವಳಿಕೆ, ಗ್ರಹಿಕೆ, ಪ್ರಶಂಸೆಗಾಗಿ ಮಾಡಿಸಿರಿ
- ಪ್ರತೀ ವಿದ್ಯಾರ್ಥಿ ಸ್ವತಂತ್ರವಾಗಿ ಚಟುವಟಿಕೆಗಳನ್ನು ಮಾಡಲಿ. ನಕಲು/ಕಾಪಿ ಮಾಡದಂತೆ ಎಚ್ಚರ ವಹಿಸಿರಿ.
- ಕಲಿಕೆಯಲ್ಲಿ ಸಹಪಾಠಿಗಳ ಸಹಕಾರ, ಪರಿಹಾರ ಬೋಧನೆ ಮೂಲಕ ಪ್ರತೀ ವಿದ್ಯಾರ್ಥಿಯೂ ಕಲಿಯುವಂತೆ ಮಾಡುವುದೇ ಆರ್.ಟಿ.ಇ. 2009ರ ಆಶಯವಾಗಿದೆ.
- ಅಭ್ಯಾಸ ಪುಸ್ತಕದಲ್ಲಿ 'ನಾನೆಷ್ಟು ಕಲಿತಿರುವೆ?' 'ನನ್ನ ಕಲಿಕೆಯ ಸ್ವಮೌಲ್ಯಮಾಪನ' ಈ ಶೀರ್ಷಿಕೆಯಲ್ಲಿರುವ ಚಟುವಟಿಕೆಗಳನ್ನು ಪ್ರತೀ ವಿದ್ಯಾರ್ಥಿಯು ಸ್ವತ: ಮಾಡುವಂತೆ ಪ್ರೇರೇಪಿಸಿ.
- ನಿಮಗೆ ಅನುಕೂಲವಾದ ದಿನದಂದು ಎಲ್ಲಾ ವಿದ್ಯಾರ್ಥಿಗಳ ಅಭ್ಯಾಸ ಪುಸ್ತಕಗಳನ್ನು ಪ್ರದರ್ಶನಕ್ಕೆ ಇರಿಸಿ ಪರಿಶೀಲಿಸಿ ತಪ್ಪುಗಳಿದ್ದರೆ ತಿದ್ದಿರಿ, ಹಾಗೆಯೇ ಉತ್ತಮವಾಗಿ ನಿರ್ವಹಿಸಿದ ವಿದ್ಯಾರ್ಥಿಗಳನ್ನು ಪ್ರಶಂಸಿಸಿರಿ.



Scanned by CamScanner

- ತಮಗೆ ನಿಗದಿಪಡಿಸಿದ ನಮೂನೆಗಳಲ್ಲಿ ವಿದ್ಯಾರ್ಥಿಗಳ ಪ್ರಗತಿಯನ್ನು ದಾಖಲು ಮಾಡಿರಿ. ಸಂದರ್ಶಕರ ಪರಿಶೀಲನೆಗೆ ಒದಗಿಸಿರಿ.

## 14.2. ದ್ವಿತೀಯ ಭಾಷೆ ಇಂಗ್ಲಿಷ್

The Department of Primary and Secondary Education, Government of Karnataka for long has felt the need for facilitating the learning of English both at Primary and Secondary levels. In line with the requirements of NCF 2005, the Directorate of Text Books, had prepared text books (Main course Books) in English for class I to X.

The Department over a period has also felt the need for complementing the main course book by preparing work books that will give the learners at these levels, a lot of opportunity for practicing what has been learnt through the Main Course Books prescribed. Hence the present series of Work Books have been prepared with the following objectives.

(A) **Objectives**

- To complement and also to supplement the contents of the Main Course Book and to enable effective internalization of the content learnt and taught.
- To supplement the activities suggested in the Main Course Book in the process of acquiring all the four basic language skills.
- To facilitate focused practice and also free practice through the activities suggested in the work book for effective reinforcement.
- To facilitate, autonomous learning .
- To maximize effective learning and thus language acquisition

(B) **Principles**

Activities that facilitate free practice will accelerate the development of language skills (L, S, R, W)



Scanned by CamScanner

( C) **Content**

| Class wise | No. of Units | Part - I | Part – II |
|---|---|---|---|
| V Standard | 12 | 07 | 05 |
| VI Standard | 12 | 07 | 05 |
| VII Standard | 11 | 06 | 05 |
| VIII Standard | 8 | 4 | 4 |
| XI Standard | 8 | 4 | 4 |

Each and every work book has two parts namely Part I and Part II and the number of units in these two parts are as given above. The number of units in each part is based on the requirements of the syllabus prescribed for each class.

The contents in the work books include the following:-

- Passages for developing listening and reading comprehension
- Different types of activities, for reinforcing the vocabulary acquired through the Main Course Book through practice.
- Activities / tasks in grammar or language use for practice with illustrations and additional inputs wherever required.
- Communicative activities that facilitate free practice
- Activities for developing psycho-motor skills and picture reading and encoding.

**Suggested guidelines for the teacher**

- The work books are for facilitating a lot of practice by the learners on their own. So teachers need not teach the work book contents.
- Teachers must ensure that every learner in the classroom works with the work book activities in every unit. A few work book activities may be done in the class room and the rest at home as after - class activities.
- The learners may still need to be guided to begin with and so the first one or two units may be teacher-guided or teacher directed with a lot of instructions to gain confidence.



Scanned by CamScanner

- Teachers are expected to ensure that learners do the activities in listening and speaking in the class itself as they require teacher interventions as in "reading aloud". The passages meant for developing listening and role play activities or dialogue reading for practice in speaking.
- Learners may be permitted to do the activities in reading, writing, grammar and vocabulary at home .
- Teachers can plan for these Work Book activities at least two periods in a week
- Teachers may give necessary feedback on the learners performance. Depending on the kind of activity, they may use different techniques for giving feedback.
- They may also encourage self evaluation at the end of each unit
- Teachers may identify common problems and errors and plan remedial teaching if necessary. Appropriate activities may be used for formative assessments (in unit tests)
- Teachers may encourage "if need be" collaborative learning while making students do the activities suggested in the Work Book and take care that the students do not copy from each other.
- For making learners do the 'classroom based' activities, such as listening and speaking, give enough instructions. The instructions may be in the language with which students are comfortable or in simple English.

However, teachers must ensure that learners understand instructions in English over a period of time. This can be achieved by minimizing the use of the mother tongue to the extent possible.

### 14.3: ಗಣಿತ

- ಅಭ್ಯಾಸ ಪುಸ್ತಕ ಅರಂಭದಲ್ಲಿರುವ ಅಶಯ ನುಡಿ, ಮುನ್ನುಡಿ ಹಾಗೂ ವಿದ್ಯಾರ್ಥಿಗಳಿಗೆ ನೀಡಲಾಗಿರುವ ಅಂಶಗಳನ್ನು ಗಮನವಿಟ್ಟು ಓದಿ. ಆ ನಿಟ್ಟಿನಲ್ಲಿ ನಿಮ್ಮ ಪ್ರಯತ್ನವಿರಲಿ.
- ಅಭ್ಯಾಸ ಪುಸ್ತಕ ಭಾಗ–1 ಮೊದಲ ಅರ್ಧ ವರ್ಷಕ್ಕೆ, ಭಾಗ–2 ಎರಡನೆ ಅರ್ಧ ವರ್ಷಕ್ಕೆ ಸಂಬಂಧಿಸಿದೆ.
- ಗಣಿತ ಅಭ್ಯಾಸ ಪುಸ್ತಕದ ಎಲ್ಲಾ ಚಟುವಟಿಕೆ/ಸಮಸ್ಯೆಗಳು ಮಕ್ಕಳ ದಿನನಿತ್ಯ ಬದುಕಿಗೆ ಸಂಬಂಧಿಸಿದ ಸನ್ನಿವೇಶಗಳನ್ನು ಒಳಗೊಂಡಿರುವುದರಿಂದ ಕಲಿಕೆ ಹೆಚ್ಚು ಬಲಗೊಳ್ಳುತ್ತದೆ.
- ಅಭ್ಯಾಸ ಪುಸ್ತಕವನ್ನು ವಿದ್ಯಾರ್ಥಿಗಳು ಸ್ವತಃ ಪೂರ್ಣಗೊಳಿಸಲು ಪ್ರೇರಣೆ ನೀಡಿರಿ. ಅವರಿಗೆ ಅಗತ್ಯ ಎನಿಸಿದಲ್ಲಿ ಅಥವಾ ಮಕ್ಕಳಿಗೆ ಸಮಸ್ಯೆ ಎನಿಸಿದಲ್ಲಿ ಅಗತ್ಯಕ್ಕೆ ತಕ್ಕಂತೆ ಮಾತ್ರ ಮಾರ್ಗದರ್ಶನ ಮಾಡಬೇಕು.



Scanned by CamScanner

- ಅಭ್ಯಾಸ ಪುಸ್ತಕ ಪೂರ್ಣಗೊಳಿಸಲು ಗೆಳೆಯರ ಮತ್ತು ಪಾಲಕರ ಸಹಕಾರ ಪಡೆಯುವಂತೆ ತಿಳಿಸಿರಿ.
- ತರಗತಿಯಲ್ಲಿ ತಾವು ಪೂರೈಸಿದ ಘಟಕ/ಪಾಠಕ್ಕೆ ಪೂರಕವಾದ ಚಟುವಟಿಕೆ/ಪ್ರಶ್ನೆಗಳನ್ನು ಮಗು ಬಿಡಿಸಲು ಪ್ರೋತ್ಸಾಹಿಸಿರಿ.
- ಅಭ್ಯಾಸ ಪುಸ್ತಕವನ್ನು ಗೃಹಪಾಠಕ್ಕೆ, ಕಲಿಕೆಯ ದೃಢೀಕರಣಕ್ಕೆ ಬಳಸಿಕೊಳ್ಳಬಹುದು.
- ಅಭ್ಯಾಸ ಪುಸ್ತಕವನ್ನು ವಿದ್ಯಾರ್ಥಿಗಳ ಕಲಿಕೆಯ ಪರಿಹಾರ ಬೋಧನೆ ಮತ್ತಿತರ ಕಲಿಕಾ ಆಯಾಮವಾಗಿ ಬಳಸಲು ತಮಗೆ ಮುಕ್ತ ಅವಕಾಶವಿದೆ.
- ಅಭ್ಯಾಸ ಪುಸ್ತಕದ ಪೂರ್ಣ ಪ್ರಯೋಜನವಾಗಬೇಕಾದಲ್ಲಿ ತಮ್ಮ ಪ್ರಯತ್ನ ಹಾಗೂ ಸಹಕಾರ ಅಗತ್ಯ.
- ಅಭ್ಯಾಸ ಪುಸ್ತಕದ ಪ್ರತಿ ಘಟಕ/ಪಾಠದ ನಂತರ ನೀಡಲಾಗಿರುವ ಕಿರು ಪರೀಕ್ಷೆಯನ್ನು ವಿದ್ಯಾರ್ಥಿಗಳು ತರಗತಿಯಲ್ಲಿ ಮಾಡುವುದು ಸೂಕ್ತ.
- ಶಿಕ್ಷಕರು ಇದನ್ನು ತಮ್ಮ (ರೂಪಣಾತ್ಮಕ) ನಿರಂತರ ಮತ್ತು ವ್ಯಾಪಕ ಮೌಲ್ಯಮಾಪನಕ್ಕೆ ಪೂರಕವಾಗಿ ಬಳಸಿಕೊಳ್ಳಬಹುದು.
- ಗಣಿತ ಅಭ್ಯಾಸ ಪುಸ್ತಕದ ಪ್ರತಿ ಘಟಕದ ನಂತರ ವಿದ್ಯಾರ್ಥಿಯ ಸ್ವಯಂ ಮೌಲ್ಯಮಾಪನಕ್ಕೆ ಅವಕಾಶ ನೀಡಲಾಗಿದ್ದು, ಅದನ್ನು ಮಕ್ಕಳು ಪೂರೈಸಲು ನೆರವು ನೀಡಿರಿ.
- ಇಲ್ಲಿ ಪ್ರತಿ ಘಟಕ/ಪಾಠದ ನಂತರ ಸ್ವಮೌಲ್ಯಮಾಪನಕ್ಕಾಗಿ ಎ, ಬಿ, ಸಿ, ಎಂದು ನಮೂದಿಸಿದೆ. ಇದರಲ್ಲಿ ಮಕ್ಕಳು ಸ್ವತಃ ತಮ್ಮನ್ನು ಮೌಲ್ಯಮಾಪನ ಮಾಡಿಕೊಳ್ಳುತ್ತಾರೆ. ಉದಾಹರಣೆಗೆ "ಎ" ಎಂದರೆ ಅತ್ಯುತ್ತಮ (ಶೇ 70 ಹಾಗೂ ಅದಕ್ಕಿಂತ ಹೆಚ್ಚು), "ಬಿ" ಎಂದರೆ ಉತ್ತಮ (ಶೇ.35 ಕ್ಕಿಂತ ಹೆಚ್ಚು ಮತ್ತು ಶೇ.70 ಕ್ಕಿಂತ ಕಡಿಮೆ), "ಸಿ" ಎಂದರೆ ಸಾಧಾರಣ (ಶೇ.35 ಕ್ಕಿಂತ ಕಡಿಮೆ)
- ವಿದ್ಯಾರ್ಥಿಗಳ ಸ್ವಯಂ ಮೌಲ್ಯಮಾಪನವನ್ನು ಗಮನಿಸಿ ತಾವು ಸಹಿ ಮಾಡುವುದರೊಂದಿಗೆ ಪಾಲಕರ ಸಹಿ ಪಡೆಯುವಂತೆ ಸಲಹೆ ನೀಡಿರಿ. ಮುಂದಿನ ಸಲ ಸಹಿ ಮಾಡುವಾಗ ಪಾಲಕರ ಸಹಿಯನ್ನು ಗಮನಿಸಿ.
- ಅಭ್ಯಾಸ ಪುಸ್ತಕದಲ್ಲಿನ ಸಮಸ್ಯೆಗಳನ್ನು ವಿದ್ಯಾರ್ಥಿಗಳು ಬಿಡಿಸಿದ ನಂತರ ಅಭ್ಯಾಸ ಪುಸ್ತಕಗಳನ್ನು ಪರಸ್ಪರ ವಿನಿಮಯ ಮಾಡಿ ಬೇರೆ ವಿದ್ಯಾರ್ಥಿಗಳಿಗೆ ನೀಡಿರಿ. ವಿದ್ಯಾರ್ಥಿಯು ಬರೆದ ಉತ್ತಮವಾದ ಉತ್ತರಗಳನ್ನು ಚರ್ಚಿಸಿರಿ. ಪ್ರತಿ ಸಲವು ವಿನಿಮಯವು ಬೇರೆ ಬೇರೆ ವಿದ್ಯಾರ್ಥಿಗಳೊಂದಿಗೆ ಆಗಬೇಕು.
- ಅಭ್ಯಾಸ ಪುಸ್ತಕದಲ್ಲಿನ ಪ್ರಶ್ನೆಗಳಂತೆ ವಿದ್ಯಾರ್ಥಿಯು ಸ್ವತಃ ಸಮಸ್ಯೆ/ಪ್ರಶ್ನೆಗಳನ್ನು ರಚಿಸಿಕೊಳ್ಳಲು ಪ್ರೇರೇಪಿಸಿ. ಇದಕ್ಕಾಗಿ ವಿದ್ಯಾರ್ಥಿಯು ಗ್ರಂಥಾಲಯದ/ಅಂತರ್ಜಾಲದ ಸಹಾಯ ಪಡೆಯಲಿ ಹಾಗೂ ಈ ಪ್ರಶ್ನೆಗಳಿಗೆ ಉತ್ತರಿಸಲು ಸಹ ಪ್ರೇರೇಪಿಸಿ.
- ಪ್ರತಿ ತಿಂಗಳ ನಿಗದಿತ ದಿನದಂದು, ಉದಾ: ಮೊದಲನೆಯ ಶುಕ್ರವಾರದಂದು, ಶಾಲೆಯಲ್ಲಿ ಅಭ್ಯಾಸ ಪುಸ್ತಕದ ಪ್ರದರ್ಶನ ಮಾಡಿಸಿರಿ. ಉತ್ತಮವಾಗಿ ಬರೆದ ವಿದ್ಯಾರ್ಥಿಗಳ ಹಾಗೂ ಸಹಪಾಠಿಗಳ ಕಲಿಕೆಯಲ್ಲಿ ಸಹಾಯ ಮಾಡಿದ ವಿದ್ಯಾರ್ಥಿಗಳನ್ನು ಅಂದೇ ಕಾರ್ಯಕ್ರಮದಲ್ಲಿ ಅಥವಾ ಮರು ದಿನದ ಬೆಳಗಿನ ಪ್ರಾರ್ಥನೆ ಸಮಯದಲ್ಲಿ ಪ್ರಶಂಸೆ ಮಾಡುವುದು, ಇದು ಇತರೆ ವಿದ್ಯಾರ್ಥಿಗಳಿಗೆ ಪ್ರೇರಕ ಶಕ್ತಿಯಾಗಬಹುದು.



Scanned by CamScanner

- ಗಣಿತ ಅಭ್ಯಾಸ ಪುಸ್ತಕದಲ್ಲಿ ಮೋಜಿನ ಗಣಿತ (ಗಣಿತದಲ್ಲಿ ಆಟ) ನೀಡಿದೆ. ಇದನ್ನು ವಿದ್ಯಾರ್ಥಿಗಳು ಸಂತಸದಿಂದ ಮಾಡುವಂತೆ ಶಿಕ್ಷಕರು ನೋಡಿಕೊಳ್ಳಬೇಕು.
- ಅಭ್ಯಾಸ ಪುಸ್ತಕದ ಅವಲೋಕನ ಹಾಗೂ ಸಮಸ್ಯೆಗಳ ಚರ್ಚೆಯನ್ನು ಮಾಡಲು ವಾರದಲ್ಲಿ ಒಂದು ಅವಧಿಯನ್ನಾದರೂ ಮೀಸಲಿಡುವುದು ಸೂಕ್ತ.
- ಶಿಕ್ಷಕರು ಈ ಅಭ್ಯಾಸ ಪುಸ್ತಕದ ಬಗ್ಗೆ ಸಲಹೆ ಮತ್ತು ಸೂಚನೆಗಳನ್ನು ಪತ್ರದ ಮೂಲಕ ಡಿ.ಎಸ್.ಇ.ಆರ್.ಟಿ, ಬೆಂಗಳೂರು ರವರಿಗೆ ತಿಳಿಸುವುದರಿಂದ ಮುಂದಿನ ದಿನಗಳಲ್ಲಿ ಇನ್ನಷ್ಟು ಬಲಪಡಿಸಲು ನೆರವಾಗುತ್ತದೆ.

## ನುಡಿಮುತ್ತುಗಳು

ನಿಜವಾದ ಶಿಕ್ಷಣವೆಂದರೆ ಮಾನವೀಯತೆಯ ವಿಕಾಸ – ಸ್ವಾಮಿ ವಿವೇಕಾನಂದ

ಸಚ್ಚಾರಿತ್ರ್ಯದ ಬೆಳವಣಿಗೆಯೇ ಶಿಕ್ಷಣದ ಆರಂಭ – ಮಹಾತ್ಮ ಗಾಂಧೀಜಿ

ಶಿಕ್ಷಣ ಪ್ರತಿ ವ್ಯಕ್ತಿಯಲ್ಲಿ ಪರಿಪೂರ್ಣತೆಯನ್ನು ತರಬೇಕು. ಜೀವನದಲ್ಲಿ ಮುನ್ನಡೆಸುವ ಸಾಮರ್ಥ್ಯ ನೀಡಬೇಕು – ಜಿಡ್ಡು ಕೃಷ್ಣಮೂರ್ತಿ

ದೈಹಿಕ, ಮಾನಸಿಕ ಹಾಗೂ ಆಧ್ಯಾತ್ಮಿಕ ಪ್ರಗತಿಗೆ ಇಂಬು ಕೊಡದ ಶಿಕ್ಷಣ ಅಪೂರ್ಣ.

ಶಿಕ್ಷಣವು ಮನುಷ್ಯನನ್ನು ಶ್ರೇಷ್ಠ ನಾಗರಿಕನನ್ನಾಗಿ ಮಾಡುತ್ತದೆ. – ಡಾ.ಎಸ್. ರಾಧಾಕೃಷ್ಣನ್

ನಡತೆ ಬೋಧಿಸದ ಶಿಕ್ಷಣ, ಮನುಷ್ಯತ್ವ ತೋರದ ವಿಜ್ಞಾನ, ಇವೆರಡೂ ಅಪಾಯಕಾರಿ ಮತ್ತು ಉಪಯೋಗವಿಲ್ಲದವು



Scanned by CamScanner

## 15. ಅನುಬಂಧಗಳು

### 15.1. ಅಭ್ಯಾಸ ಪುಸ್ತಕಗಳ ಮೂಲಕ ಶಿಕ್ಷಕರು ಮಕ್ಕಳ ಕಲಿಕೆಯ ಮೌಲ್ಯಮಾಪನ ಮಾಡುವ ನಮೂನೆ

(ಪ್ರತಿ ತಿಂಗಳಿಗೊಮ್ಮೆ ಭರ್ತಿ ಮಾಡುವುದು)

ಶಾಲೆಯ ಹೆಸರು:

ಡೈಸ್ ಸಂಖ್ಯೆ:

ಜಿಲ್ಲೆಯ ಹೆಸರು:

ಬ್ಲಾಕ್:

ಕ್ಲಸ್ಟರ್ ಹೆಸರು:

ದಿನಾಂಕ:

ಶಿಕ್ಷಕರ ಹೆಸರು:

ಕೆಜಿಐಡಿ ಸಂಖ್ಯೆ . . . .

ತರಗತಿ: 4/5/6/7/8/9

ದಾಖಲಾದ ಮಕ್ಕಳ ಸಂಖ್ಯೆ:. . . .

ವಿಷಯ:ಕನ್ನಡ/ ಇಂಗ್ಲಿಷ್/ಗಣಿತ

ಘಟಕದ ಹೆಸರು:. .. . . . .

- ಈ ದಿನಾಂಕದವರೆಗೆ ವಾರ್ಷಿಕ ಪಾಠ ಹಂಚಿಕೆ ಪ್ರಕಾರ ನಿಗದಿಪಡಿಸಲಾದ ಪಾಠ / ಘಟಕಗಳ ಸಂಖ್ಯೆ:. . .
- ಈ ದಿನಾಂಕದವರೆಗೆ ಪೂರ್ಣಗೊಳಿಸಿದ ಪಾಠ / ಘಟಕಗಳ ಸಂಖ್ಯೆ:. . . . . .
- ಅಭ್ಯಾಸ ಪುಸ್ತಕಗಳು ಲಭ್ಯವಾಗಿರುವ ವಿದ್ಯಾರ್ಥಿಗಳ ಸಂಖ್ಯೆ. . .
- ಉದ್ದೇಶಗಳಿಗೆ ಅನುಗುಣವಾಗಿ ಅಭ್ಯಾಸ ಪುಸ್ತಕಗಳು ಸಮರ್ಪಕವಾಗಿ ಬಳಕೆಯಾಗುತ್ತಿದೆಯೇ? ಪೂರ್ಣವಾಗಿ / ಬಹುತೇಕ / ಭಾಗಶಃ / ಇಲ್ಲ
- ವಿದ್ಯಾರ್ಥಿಗಳು ಸ್ವತಃ ಅಭ್ಯಾಸ ಪುಸ್ತಕವನ್ನು ಬಳಸುತ್ತಿದ್ದಾರೆಯೇ? ಪೂರ್ಣವಾಗಿ / ಬಹುತೇಕ / ಭಾಗಶಃ / ಇಲ್ಲ
- ಅಭ್ಯಾಸ ಪುಸ್ತಕ ಬಳಕೆಗೆ ಮಾರ್ಗದರ್ಶನ ಹಾಗೂ ಸಹಿ ಮಾಡಿರುವಿರಾ? ಹೌದು/ಇಲ್ಲ
- ಅಭ್ಯಾಸ ಪುಸ್ತಕ ಬಳಕೆ ಪ್ರಗತಿ (ಮಕ್ಕಳ ಸಂಖ್ಯೆ)

ಪೂರ್ಣ (ಶೇ100ರಷ್ಟು). . . . . .          ಬಹುತೇಕ (ಶೇ75–99ರಷ್ಟು). . . . . . . . . . .

ಭಾಗಶಃ (ಶೇ40 –74) . . . .          ಅಪೂರ್ಣ (ಶೇ 39–0 ). . . . . . . .

* ನಿರೀಕ್ಷಿತ ಸಾಧನೆ ಶೇ. . . . .          ಸಾಧಿಸಿದ ಸಾಧನೆ ಶೇ. . . . . .

* ವ್ಯತ್ಯಯಕ್ಕೆ ಕಾರಣಗಳು.. . . . . . . . . . . . . . .



Scanned by CamScanner

## 15.2 ಅಭ್ಯಾಸ ಪುಸ್ತಕಗಳ ಬಳಕೆಯ ಕುರಿತು ಸಂದರ್ಶಕರ ಮೌಲ್ಯಮಾಪನ ನಮೂನೆ.

ಸಂದರ್ಶಕರ ಹೆಸರು: ಪದನಾಮ:

ಶಾಲೆಯ ಹೆಸರು: ಡೈಸ್ ಸಂಖ್ಯೆ:

ಜಿಲ್ಲೆಯ ಹೆಸರು: ಬ್ಲಾಕ್:

ಕ್ಲಸ್ಟರ್ ಹೆಸರು: ದಿನಾಂಕ:

ತರಗತಿ: 4/5/6/7/8/9 ಹಾಜರಿದ್ದ ಮಕ್ಕಳ ಸಂಖ್ಯೆ:. . . .

ವಿಷಯ:ಕನ್ನಡ/ಇಂಗ್ಲಿಷ್/ಗಣಿತ ಘಟಕದ ಹೆಸರು:. .. . . . .

- ಈ ದಿನಾಂಕದವರೆಗೆ ವಾರ್ಷಿಕ ಪಾಠ ಹಂಚಿಕೆ ಪ್ರಕಾರ ನಿಗದಿಪಡಿಸಲಾದ ಪಾಠ/ಘಟಕಗಳ ಸಂಖ್ಯೆ:.
- ಈ ದಿನಾಂಕದವರೆಗೆ ಪೂರ್ಣಗೊಳಿಸಿದ ಪಾಠ/ಘಟಕಗಳ ಸಂಖ್ಯೆ:. . . . . .
- ಪೂರ್ಣಗೊಳಿಸದಿರುವುದಕ್ಕೆ ಕಾರಣಗಳು:. . . . . . . . . . . .
- ಅಭ್ಯಾಸ ಪುಸ್ತಕಗಳು ಲಭ್ಯವಾಗಿರುವ ವಿದ್ಯಾರ್ಥಿಗಳ ಸಂಖ್ಯೆ. . .
- ನಿಗದಿಪಡಿಸಿದಂತೆ ಅಭ್ಯಾಸ ಪುಸ್ತಕಗಳ ಬಳಕೆಯಾಗುತ್ತಿದೆ.
  ಪೂರ್ಣವಾಗಿ/ಬಹುತೇಕ/ಭಾಗಶಃ/ಇಲ್ಲ
- ವಿದ್ಯಾರ್ಥಿಗಳು ಸ್ವತಃ ಅಭ್ಯಾಸ ಪುಸ್ತಕ ಬಳಸುತ್ತಿದ್ದಾರೆ. ಪೂರ್ಣವಾಗಿ/ಬಹುತೇಕ/ಭಾಗಶಃ/ಇಲ್ಲ
- ಶಿಕ್ಷಕರು ಅಭ್ಯಾಸ ಪುಸ್ತಕ ಬಳಕೆಗೆ ಮಾರ್ಗದರ್ಶನ ಹಾಗೂ ಸಹಿ ಮಾಡಿದ್ದಾರೆ. ಹೌದು/ಇಲ್ಲ
- ಅಭ್ಯಾಸ ಪುಸ್ತಕ ಸಂಪೂರ್ಣ ಭರ್ತಿ ಮಾಡಿದ ಮಕ್ಕಳ ಶೇಕಡ ಪ್ರಮಾಣ :
- ಸಂದರ್ಶನ ದಿನಾಂಕದ ಕೊನೆಗೆ ಭರ್ತಿ ಮಾಡಿದ ಅಭ್ಯಾಸ ಪುಸ್ತಕದ ಕೆಲವು ಪ್ರಶ್ನೆಗಳನ್ನು ತರಗತಿಯಲ್ಲಿ ಯಾದೃಚ್ಛಿಕ(ರ್ಯಾಂಡಂ) ವಾಗಿ ಆಯ್ದ ವಿದ್ಯಾರ್ಥಿಗಳಿಗೆ ಕೇಳಿ/ಬರೆಸಿ ಪರೀಕ್ಷಿಸುವುದು.
  ಅದರಲ್ಲಿ ಶೇ 100ರಷ್ಟು ಉತ್ತರಿಸಿದ ಮಕ್ಕಳ ಸಂಖ್ಯೆ:. . . . . . . .
  ಅದರಲ್ಲಿ ಭಾಗಶಃ ಉತ್ತರಿಸಿದ ಮಕ್ಕಳ ಸಂಖ್ಯೆ:. . . . . . . . . .
  ಅದರಲ್ಲಿ ಉತ್ತರಿಸದಿರುವ ಮಕ್ಕಳ ಸಂಖ್ಯೆ:. . . . . . . .. . . . .
- ಈ ತರಗತಿಯ ಅಭ್ಯಾಸ ಪುಸ್ತಕ ವೀಕ್ಷಣೆಗೆ ನೀವು ನೀಡುವ ಅಂಕ (ಸ್ಕೇಲ್ ರೇಟಿಂಗ್): 5, 4, 3, 2, 1



ಸರ್ಕಾರಿ ಕೇಂದ್ರ ಮುದ್ರಣಾಲಯ, ಬೆಂಗಳೂರು-59 ಕಾ.ಸೂ.ಪ. ಪಿ-102/47,000 ಪ್ರತಿಗಳು, ದಿನಾಂಕ: 01-09-2017

Scanned by CamScanner